ಅಧ್ಯಾತ್ಮಗ್ರಂಥಾವಳಿ

# ಲಕ್ಷಣಶಾಸ್ತ್ರ ಉರುಫ್ ಹಸೇನ್


ಬರೆದವರು :

**ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರು**


ಕ್ರಮಾಂಕ ೫೦


ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

1957

# ಪ್ರಕಾಶಕರ ಬಿನ್ನಹ


ಲಕ್ಷಣಶಾಸ್ತ್ರದ ಈ ಕನ್ನಡಿಯು ಶ್ರೀಸಚ್ಚಿದಾನಂದಸರಸ್ವತೀಸ್ವಾಮಿಗಳವರಿಂದ ಪ್ರಶ್ನೋತ್ತರರೂಪದಲ್ಲಿ ರಚಿತವಾಗಿ "ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯ ಐದನೆಯ ಸಂಪುಟದಲ್ಲಿ ಕ್ರಮಾನುಗತವಾಗಿ 1934ರಲ್ಲಿ ಪ್ರಕಾಶವಾಯಿತು. ಅದನ್ನು ಬಗ್ಗೆ ಗ್ರಾಹಕರು ಬಹಳ ಕುತೂಹಲದಿಂದ ಓದುತ್ತಿದ್ದರು. ಅದರ ತೆಗೆದಚ್ಚುಗಳೆಲ್ಲ ಮಾರಾಟವಾಗಿದ್ದರೂ ಇನ್ನೂ ಆ ಗ್ರಂಥಕ್ಕೆ ಮಹಾಜನರ ಆದರವಿದೆ ಎಂಬುದನ್ನು ತಿಳಿದು ಮತ್ತೊಂದು ಸಂಸ್ಕರಣವನ್ನು ಹೊರಕ್ಕೆ ತಂದಿರುತ್ತೇವೆ.

ನವೀನತರ್ಕಶಾಸ್ತ್ರದ ಪ್ರಭಾವವು ನಮ್ಮ ದೇಶದಲ್ಲಿ ವೇದಾಂತದ ಮೇಲೆ ಬಹಳವಾಗಿ ಆಗಿ ಅನುಭವಾನುಸಾರವಾದ ತರ್ಕವನ್ನು ಕಡೆಗಣಿಸುವಷ್ಟು ಮಟ್ಟಿನ ದುಷ್ಪರಿಣಾಮವಾಗಿರುತ್ತದೆ. ಆದ್ದರಿಂದ ಅವನ್ನು ಹಿಡಿತದಲ್ಲಿಟ್ಟುಕೊಂಡೇ ವೇದಾಂತಕ್ಕೆ ಜೋಡಿಸಿಕೊಳ್ಳಬೇಕೆಂಬುದನ್ನು ಮನಗಾಣಿಸುವ ಹೊತ್ತಿಗೆಯಿದು.

ಶ್ರೋತೃಗಳಿಗೆ ವಿನೋದಕಾಲಕ್ಷೇಪವನ್ನು ಒದಗಿಸುವದರ ಜೊತೆಗೆ ಮೇಲೆ ಹೇಳಿರುವ ತತ್ತ್ವವನ್ನು ಮನದಟ್ಟುಮಾಡುವದೆಂಬ ಭರವಸೆಯಿಂದ ಈ ನವೀನಸಂಸ್ಕರಣವನ್ನು ವಾಚಕರ ಮುಂದೆ ಇಟ್ಟಿರುವೆವು.

ಹೇವಿಳಂಬಿಸಂವತ್ಸರ
ಕಾರ್ತಿಕ ಕೃಷ್ಣ ೮

ಪ್ರಕಾಶಕರು.



# ಲಕ್ಷಣಶಾಸ್ತ್ರಿ ಉರುಫ್ ಹಸೇನ್

೧

ಈ ಕಥೆಯನ್ನು ನಾನು ಕೇಳಿ ಇಲ್ಲಿಗೆ ಇಪ್ಪತ್ತುವರ್ಷಗಳ ಮೇಲಾ ಯಿತು. ಇದನ್ನು ನನ್ನ ಸ್ನೇಹಿತರು ಅನೇಕರಿಗೆ ಹೇಳಿದ್ದೇನೆ. ಅವರಲ್ಲಿ ಕೆಲವರು ಈ ಕಥೆಯನ್ನು ಮುದ್ರಿಸಿದರೆ ಬಹುಜನರಿಗೆ ಉಪಯೋಗವಾಗ ಬಹುದೆಂದು ಅಭಿಪ್ರಾಯಪಟ್ಟದ್ದರಿಂದ ಈ ಪುಸ್ತಕವನ್ನು ಮುದ್ರಣಶಾಲೆಗೆ ಕಳುಹಿಸಿರುತ್ತೇನೆ. ವಾಚಕರೆ, ಕೊನೆಯವರೆಗೂ ಈ ಗ್ರಂಥವನ್ನು ಓದಿ ನಿಮ್ಮ ಅಭಿಪ್ರಾಯವನ್ನು ಕೊಡಿ.

ಒಂದು ದಿನ ನಾನು ತುಂಗಭದ್ರಾನದಿಯಲ್ಲಿ ಸ್ನಾನಮಾಡಿಕೊಂಡು ಎಂದಿನಂತೆ ಹರಿಹರೇಶ್ವರನ ದರ್ಶನಕ್ಕೆ ಹೋದೆನು. ಅಷ್ಟುಹೊತ್ತಿಗೆ ಸರಿಯಾಗಿ ದೇವರಿಗೆ ಮಂಗಳಾರತಿಯು ನಡೆಯುತ್ತಿತ್ತು. ಈ ಸಮಯದಲ್ಲಿ ತರ್ಕಶಾಸ್ತ್ರದ ಮೇಲೆ ನನ್ನ ಮನಸ್ಸು ಆಗಾಗ್ಗೆ ಹೋಗುತ್ತಿತ್ತು; ಆದ್ದರಿಂದ ಈ ದಿನ ಮಂಗಳಾರತಿಯನ್ನು ತೆಗೆದುಕೊಳ್ಳುವಾಗ "ಹರಿಹರೇಶ್ವರ, ನನಗೆ ತರ್ಕಶಾಸ್ತ್ರದ ರಹಸ್ಯವನ್ನು ತಿಳಿಸಕೂಡದೆ?" ಎಂದು ಮನಸ್ಸಿನಲ್ಲಿಯೇ ಅಂದು ಕೊಂಡೆನು. ಶ್ರೀಹರಿಹರೇಶ್ವರನು ಆ ದಿನ ಪ್ರಸನ್ನಚಿತ್ತನಾದನೆಂದು ತೋರು ತ್ತದೆ. ಏಕೆಂದರೆ ನಾನು ಒಗೆದಿದ್ದ ಒದ್ದೆಯ ಬಟ್ಟೆಗಳ ಗಂಟನ್ನು ಕೈಯಲ್ಲಿ ಹಿಡಿದುಕೊಂಡು ಗರುಡಗಂಬವನ್ನು ದಾಟಿದೆನೋ, ಇಲ್ಲವೋ, "ಜಯ ವಿಶ್ವನಾಥ!" ಎಂಬ ಘನಗಂಭೀರವಾದ, ಧ್ವನಿಯೊಂದು ನನ್ನ ಕಿವಿಗೆ ಬಿತ್ತು. ಅತ್ತಕಡೆಗೆ ತಿರುಗಲಾಗಿ ಒಬ್ಬ ತೇಜಸ್ವಿಗಳಾದ ಸಂನ್ಯಾಸಿಗಳು ದೇವಸ್ಥಾನದ ಬಾಗಿಲಲ್ಲಿ ಕುಳಿತಿದ್ದರು. ಸ್ವಭಾವವಾಗಿ ನನಗೆ ಸಂನ್ಯಾಸಿಗಳಲ್ಲಿ ಭಕ್ತಿ ಹೆಚ್ಚಾಗಿದ್ದದ್ದರಿಂದ ಮನೆಗೆ ದಯಮಾಡಿಸಬೇಕೆಂದು ವಿನಯದಿಂದ ಪ್ರಾರ್ಥಿಸಿ ಕೊಂಡೆನು. ಅವರು "ಸಂನ್ಯಾಸಿಗಳಿಗೆ ಯಾರ ಮನೆಯಲ್ಲಿ ಏನು ಕೆಲಸ?" ಎಂದು ಹಸನ್ಮುಖರಾಗಿ ಹೇಳುತ್ತ "ನಿನ್ನ ಕೈಯಲ್ಲಿರುವ ಬಟ್ಟೆಯನ್ನು ಮನೆ ಯಲ್ಲಿಟ್ಟು ಬಾ; ನಿನ್ನೊಡನೆ ಎರಡು ಮಾತುಗಳನ್ನು ಆಡತಕ್ಕದ್ದು ಇದೆ"

ಎಂದರು. ನಮ್ಮ ಮನೆಗೆ ಅವರು ಭಿಕ್ಷಕ್ಕೆ ಬರಬೇಕೆಂದು ನಾನು ಎಷ್ಟು ಬಗೆಯಾಗಿ ಬೇಡಿಕೊಂಡರೂ ಅವರು ಅದಕ್ಕೆ ಒಪ್ಪದೆ "ಅಯ್ಯ, ನಾವು ಬೇಯಿಸಿದ ಪದಾರ್ಥವನ್ನೇ ತಿನ್ನುವದಿಲ್ಲ. ಭಿಕ್ಷಕ್ಕೆ ಹೋಗುವ ಪದ್ಧತಿಯನ್ನೂ ಇಟ್ಟುಕೊಂಡಿಲ್ಲ. ಆದ್ದರಿಂದ ಈ ವಿಚಾರವನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಬೇಕಾದರೆ ಮನೆಗೆ ಹೋಗಿ ಬಾ, ಎರಡುಮಾತು ಹೇಳುತ್ತೇವೆ" ಎಂದರು.

ನಾನು ಕೂಡಲೆ ಮನೆಗೆ ಹೋಗಿ ಒದ್ದೆಯ ಬಟ್ಟೆಗಳನ್ನು ಹರವಿ ಮತ್ತೆ ಆ ಸಂನ್ಯಾಸಿಗಳ ದರ್ಶನಕ್ಕೆ ಹೊರಡಬೇಕು– ಎನ್ನುವಷ್ಟರಲ್ಲಿ ಯಾರೋ ನನ್ನ ಸ್ನೇಹಿತರು ಬಂದು ಮಾತಿಗೆ ಕೂಡಿಸಿಕೊಂಡುಬಿಟ್ಟರು. ಸಂನ್ಯಾಸಿಗಳ ವಿಷಯವೇ ಮರೆತುಹೋಯಿತು. ಆ ದಿನ ಊಟಕ್ಕೆ ಕೂತಿದ್ದಾಗ ಮಾತಿಗೆ ಮಾತು ಬಂದು ಥಟ್ಟನೆ ಸಂನ್ಯಾಸಿಗಳ ನೆನಪು ಬಂತು. "ಅಹಹ! ಎಂಥ ತಪ್ಪುಮಾಡಿದೆನು!" ಎಂದುಕೊಂಡು ಧಿಗ್ಗನೆ ಎದ್ದು ಕೈತೊಳೆದುಕೊಂಡು ಅಂಗಡಿಗೆ ಹೋಗಿ ಒಂದು ಚಿಪ್ಪು ರಸಬಾಳೆಹಣ್ಣು, ಸ್ವಲ್ಪ ಸಕ್ಕರೆ– ಇಷ್ಟನ್ನೂ ತೆಗೆದುಕೊಂಡು ಸ್ವಾಮಿಗಳು ಇದ್ದ ಕಡೆಗೆ ಹೋದೆನು. ಅವರು ಬೆಳಗ್ಗೆ ಎಲ್ಲಿ ಕೂತಿದ್ದರೋ ಆ ಸ್ಥಳದಲ್ಲಿಯೇ ಕದಲದೆ ಇದ್ದರು. ಆಗ ಉರಿಬಿಸಿಲಾಗಿದ್ದರೂ ಅವರು ಶಾಂತರಾಗಿ ನಗೆಮೊಗದಿಂದ ಕೂಡಿ ನನ್ನನ್ನು ಕಂಡ ಕೂಡಲೆ ಕೈಬೀಸಿ "ಇತ್ತ ಬಾರಯ್ಯ" ಎಂದರು. ನಾನು ಅವರ ಮುಂದೆ ಹಣ್ಣನ್ನೂ ಸಕ್ಕರೆಯನ್ನೂ ಇಟ್ಟು ಕೂತುಕೊಂಡೆನು. ಬಳಿಕ ಅವರ ಬಾಯಿಂದ ಏನಾದರೂ ಎರಡು ಮಾತು ಕೇಳಬೇಕೆಂಬ ಕುತೂಹಲದಿಂದ "ಮಹಾಸ್ವಾಮಿ, ಯಾವ ದೇಶದಿಂದ ಇಲ್ಲಿಗೆ ದಯಮಾಡಿಸೋಣವಾಯಿತೊ! ತಮ್ಮಂಥವರ ದರ್ಶನದಿಂದಲೇ ನಮ್ಮಗಳಿಗೆ ಎಷ್ಟೋ ಅಜ್ಞಾನವು ಪರಿಹಾರವಾಗುತ್ತದೆ; ಇನ್ನು ಸಾಕ್ಷಾತ್ತಾಗಿ ತಮ್ಮ ವಾಣಿಯನ್ನು ಕೇಳಿದರೆ ಹೇಳತಕ್ಕದ್ದೇನು? ನನ್ನಲ್ಲಿ ಕೃಪೆಯಿಟ್ಟು ಯಾವದಾದರೂ ಜ್ಞಾನೋಪದೇಶವನ್ನು ಮಾಡಬೇಕು" ಎಂದು ಕೇಳಿಕೊಂಡೆನು. ಅವರು "ಅಯ್ಯ, ನಿನಗೆ ತರ್ಕಶಾಸ್ತ್ರದಲ್ಲಲ್ಲವೆ, ಅಭಿರುಚಿ? ಉಳಿದ ಜ್ಞಾನವನ್ನು ಕಟ್ಟಿಕೊಂಡು ನಿನಗೇನಾಗಬೇಕು? ಈ ದಿನ ಬೆಳಗ್ಗೆ ದೇವರ ಮಂಗಳಾರತಿಯ ಕಾಲಕ್ಕೆ ಕೂಡ ತರ್ಕಶಾಸ್ತ್ರದ ಸ್ಮರಣೆಯನ್ನು ಮಾಡಿಕೊಂಡೆಯಲ್ಲವೆ?" ಎನಲು ನನಗೆ ಆಶ್ಚರ್ಯವೂ ಭಯವೂ ಏಕಕಾಲಕ್ಕೆ

ಉಂಟಾದವು. "ಇವರಿಗೆ ನಾನು ಮನಸ್ಸಿನಲ್ಲಿ ಮಾಡಿಕೊಂಡದ್ದು ಹೇಗೆ ತಿಳಿಯಿತು ? ಇಂಥ ಮಹಾತ್ಮರ ಸಂಗವು ದೊರೆತಾಗಲೂ ಇವರ ಉಪದೇಶದಿಂದ ಕೃತಾರ್ಥನಾಗದೆ ಇದ್ದರೆ ನನ್ನ ಬಾಳು ವ್ಯರ್ಥವಲ್ಲವೆ?" ಎಂದುಕೊಂಡು ಪ್ರಕಾಶವಾಗಿ "ಮಹಾಸ್ವಾಮಿ, ನಮ್ಮಂಥವರ ಬಾಳೇ ಹೀಗಿರುತ್ತದೆ. ಮಹಾತ್ಮರಾದ ತಮ್ಮಂಥವರು ಎದುರಿಗೇ ಇರುತ್ತಿದ್ದರೂ ಅಲಕ್ಷ್ಯಮಾಡಿ ಯಾವದೋ ಶಾಸ್ತ್ರವಾಸನೆಯಿಂದ ದೇವರನ್ನು ಕೂಡ ನಮ್ಮ ಕಡೆಗೇ ಎಳೆಯುವದಕ್ಕೆ ಪ್ರಯತ್ನಿಸುತ್ತೇವೆ. ಅದರೂ ಈ ತರ್ಕಶಾಸ್ತ್ರವೆಂಬುದು ಅಷ್ಟು ನೀಚವಾದದ್ದೆ ? ಅದರಲ್ಲಿ ಮನಸ್ಸು ಹಾಕಿದ್ದು ತಪ್ಪೆ? ಈ ಶಾಸ್ತ್ರವನ್ನು ಮಹರ್ಷಿಗಳಾದ ಗೌತಮರೇ ಕಂಡುಹಿಡಿದಿರುವರೆಂದೂ ಇವರ ತತ್ತ್ವಜ್ಞಾನದಿಂದ ಸಕಲ ಮಿಥ್ಯಾಜ್ಞಾನಗಳೂ ತೊಲಗಿ ಮೋಕ್ಷವೇ ಹಸ್ತಗತವಾಗುವದೆಂದೂ ಕೇಳಿದ್ದೇನಲ್ಲ! ಈ ವಿಷಯದಲ್ಲಿ ನಿಜವೇನೊ! ಅನುಗ್ರಹಿಸಬೇಕು" ಎಂದು ಮತ್ತೆ ಅಡ್ಡಬಿದ್ದು ಬೇಡಿಕೊಂಡೆನು.

ಆಗ ಆ ಸಂನ್ಯಾಸಿಶ್ರೇಷ್ಠರು ನನ್ನನ್ನು ಕುರಿತು ಇಂತೆಂದರು: ಅಯ್ಯ, ನಾನು ಹೇಳುವ ಕಥೆಯನ್ನು ಕೇಳು. ನಿನ್ನ ಸಂಶಯವೆಲ್ಲ ತೊಲಗುವದು. ಈ ಕಥೆಯನ್ನು ನಿನಗೋಸ್ಕರ ನಾನು ಕಲ್ಪಿಸಲಿಲ್ಲ. ನನ್ನ ಪೂರ್ವಾಶ್ರಮದ ಕಥೆಯೇ ಇದು. ನನ್ನ ಅನುಭವವನ್ನು ನನಗೆ ಆದ ಕ್ರಮದಲ್ಲಿ ನಿನ್ನ ಮುಂದೆ ಇಡುವೆನು. ಅದರಿಂದ ನಿನಗೆ ತುಂಬ ಪ್ರಯೋಜನವಾಗುವದೆಂದು ನನ್ನ ನಂಬಿಕೆಯುಂಟು.

ನಾನು ಕಲಕತ್ತೆಯ ಸಮೀಪದಲ್ಲಿ ಒಬ್ಬ ದೊಡ್ಡ ಜಮೀನುದಾರನ ಒಬ್ಬನೇ ಒಬ್ಬ ಮಗನು. ನಮ್ಮ ತಂದೆಯು ಬಹುಕಾಲ ಸೂರ್ಯೋಪಾಸನೆಯನ್ನು ಮಾಡಿದ ಮೇಲೆ ನನ್ನನ್ನು ಪಡೆದರಂತೆ. ನಾನಿನ್ನೂ ಬಾಲ್ಯದಲ್ಲಿರುವಾಗಲೆ ನನ್ನ ಬುದ್ಧಿಯು ಬಲುಚುರುಕಾಗಿದ್ದಿತು. ಅದನ್ನು ಕಂಡು ನನ್ನ ತಂದೆಗೆ ಮಾತ್ರವೇ ಅಲ್ಲದೆ ಸುತ್ತಮುತ್ತಲಿನ ಮನೆಯವರಿಗೂ ಆಶ್ಚರ್ಯವಾಗುತ್ತಿತ್ತು. ಆಟವಾಡುವಾಗಲೂ ನನಗೆ ವಾದದ ಮೇಲೆಯೇ ಲಕ್ಷ್ಯ ಹೆಚ್ಚು. ನನ್ನ ಜೊತೆಯಲ್ಲಿದ್ದ ಹುಡುಗರನ್ನು ಬಗೆಬಗೆಯ ವಾದಗಳಿಂದ ಗೋಳಾಡಿಸು

ತ್ತಿದ್ದೆನು. ಉದಾಹರಣೆಗೆ ಒಂದು ಸಲ ಗೋಲಿಯಾಡುತ್ತಿದ್ದಾಗ ನನ್ನ ಗೆಳೆಯ ರಾಮುವಿಗೂ ನನಗೂ ಒಂದು ಜಗಳ ಹುಟ್ಟಿತು. ನನ್ನದು ನಾಲ್ಕು ಏಟಾಯಿತೆಂದು ರಾಮು, ಏಳಾಯಿತೆಂದು ನಾನು– ಹೀಗೆ ಇಬ್ಬರಿಗೂ ವಿವಾದ ಉಂಟಾಯಿತು. "ಈಗಿನ್ನೂ ಮೂರಾಗಿತ್ತು, ಏಳೆಲ್ಲಿ ಬಂತು ?" ಎಂದು ರಾಮು ಅನ್ನುವನು. "ಆಗ ಮೂರಾಗಿತ್ತು, ಈಗ ನಾಲ್ಕಾಯಿತು ; ಏಳಾಗ ಲಿಲ್ಲವೆ ?" ಎಂದು ನಾನು. ಹೀಗೆ ಚರ್ಚೆಯು ಬೆಳೆಯಿತು. ರಾಮುವು ಗೋಲಿಯಲ್ಲಿ ಗಟ್ಟಿಗನಾದರೂ ನನ್ನ ಯುಕ್ತಿಯ ಮುಂದೆ ಅವನ ಆಟವೇನೂ ನಡೆಯಲಿಲ್ಲ. ಬಹಳ ಹೊತ್ತು ಕಾದಾಡಿ ಕೊನೆಗೆ ಅಳುತ್ತಾ ಅವನು ಮನೆಗೆ ಹೊರಟುಹೋದನು. ಹೀಗೆಯೇ ಕಣ್ಣಾಮುಚ್ಚಾಲೆಯ ಆಟವೊಂದು ಪ್ರಾರಂಭ ವಾಗಿದ್ದಾಗ ನನ್ನನ್ನು ಹುಡುಕಿ ಮುಟ್ಟಿದವರಿಗೆ ಐದು ಸಲಾಮು ಹಾಕುತ್ತೇ ನೆಂದು ಹೇಳಿದೆನು. ಆದರೆ ನನ್ನ ಯಾವ ಅವಯವವನ್ನು ಮುಟ್ಟಿದರೂ ಕೈ ಕಾಲು– ಮುಂತಾದವನ್ನು ಮುಟ್ಟಿದಂತೆ ಆಯಿತೇ ಹೊರತು ನನ್ನನ್ನು ಮುಟ್ಟಿದಹಾಗೆ ಆಗಲಿಲ್ಲವೆಂದು ನಾನು ತೆಗೆದ ಯುಕ್ತಿಗೆ ಆ ದಿನ ಯಾರೂ ಉತ್ತರಹೇಳುವದಕ್ಕಾಗಲಿಲ್ಲ !

ಹೀಗೆ ಬರುತ್ತ ಬರುತ್ತ ನನ್ನ ವಾದವಿದ್ಯೆಯು ಬೆಳೆಯುತ್ತ ಬಂತು. ನನಗೆ ಅಕ್ಷರಾಭ್ಯಾಸವಾದ ಮೇಲೆ ಹಳೆಯ ಪದ್ಧತಿಯ ಮೇರೆಗೆ ಅಮರ, ಶಬ್ದ, ಸಮಾಸಚಕ್ರ– ಇವೆಲ್ಲ ಮುಗಿದು ರಘುವಂಶ ಒಂದು ಸರ್ಗ, ನೈಷಧ ಒಂದು ಸರ್ಗ– ಹೀಗೆ ಎರಡು ಸರ್ಗ ಕಾವ್ಯವಾಯಿತು. ಇಷ್ಟರಲ್ಲಿ ನೆರೆಮನೆಯ ಲಕ್ಷ್ಮಣಬಾಬು ಒಂದು ದಿನ ನಮ್ಮ ಮನೆಗೆ ಬಂದಿದ್ದಾಗ ನಾನು ಪಾಠಓದುವ ಕ್ರಮ, ಮಾತನಾಡುವಾಗ ಉಪಯೋಗಿಸುತ್ತಿದ್ದ ಯುಕ್ತಿ– ಇವನ್ನೆಲ್ಲ ನೋಡಿ ನಮ್ಮ ತಂದೆಯವರನ್ನು ಕುರಿತು, "ಅಯ್ಯೋ ! ಅನ್ಯಾಯವಾಗಿ ಹುಡುಗನನ್ನು ಹಾಳುಮಾಡುತ್ತೀರಲ್ಲ ! ಇವನ ಬುದ್ಧಿಗೆ ತಕ್ಕ ತರ್ಕಕ್ಕೆ ಹಾಕದ ಮೇಲೆ ವ್ಯರ್ಥ. ಆ ಮೋಹನಬಾಬುವಿನ ಹುಡುಗನನ್ನು ನೋಡಿರಿ. ಈಗಾಗಲೆ ಉತ್ತರವಾದ ಪೂರೈಸಿಬಿಟ್ಟ !" ಎಂದು ಹೇಳಿ ಹೊರಟುಹೋದರು. ಅಂದಿನಿಂದ ನನಗೆ ಕಾವ್ಯದಮೇಲೆ ರುಚಿ ತಪ್ಪಿಹೋಯಿತು. ಏನಾದರೂ ಮಾಡಿ 'ತರ್ಕವಾಗೀಶಾಲಂಕಾರಭಟ್ಟಾಚಾರ್ಯ' ಎನ್ನಿಸಿಕೊಳ್ಳದೆ ಇದ್ದರೆ ಜನ್ಮವು ಸಾರ್ಥಕವಾದೀತೆ !– ಎಂದುಕೊಂಡು ನಮ್ಮ ಮನೆಯಲ್ಲಿ ಇದ್ದ ಹಳೆಯ

ಓಲೆಬುಗರಿಯು ಪುಸ್ತಕದಲ್ಲಿ ತರ್ಕಸಂಗ್ರಹವನ್ನೂ ಮುಕ್ತಾವಳಿಯನ್ನೂ ಓದುವದಕ್ಕೆ ಪ್ರಾರಂಭಿಸಿದೆನು. ಒಂದು ತಿಂಗಳೊಳಗಾಗಿ ನನಗೆ ದ್ರವ್ಯ, ಗುಣ, ಕರ್ಮ– ಮುಂತಾದ ಹೆಸರುಗಳು ನೀರುಕುಡಿದಹಾಗೆ ಆಗಿಬಿಟ್ಟವು. ಆ ತರ್ಕಪುಸ್ತಕಗಳ ಅರ್ಥವೆಲ್ಲ ನನಗೆ ಸರಿಯಾಗಿ ತಿಳಿಯಿತೆಂದಲ್ಲ, ತರ್ಕದ ಭಾಷೆಯ ಪರಿಚಯವು ಚೆನ್ನಾಗಿ ಆಗಿಬಿಟ್ಟಿತು. ಈ ಹೊಸದಾಗಿ ಕಲಿತ ತರ್ಕವನ್ನು ಚರ್ಚೆಮಾಡುವದಕ್ಕೆ ನೆರೆಹೊರೆಯಲ್ಲಿ ಯಾವ ಹುಡುಗರೂ ಇರಲಿಲ್ಲವಾದ್ದರಿಂದ ನನಗೆ ತುಂಬ ವ್ಯಸನವಾಯಿತು. ಒಂದು ದಿವಸ ನಮ್ಮ ತಾಯಿಯು ಚಪಾತಿಯನ್ನೂ ಸಕ್ಕರೆಯನ್ನೂ ಬಡಿಸುತ್ತಿದ್ದಳು. ಆಗ ನಮ್ಮ ತಂದೆ ಎಲ್ಲಿಯೋ ಹೊರಗೆ ಹೋಗಿದ್ದರು. "ಮಗೂ, ಚಪಾತಿ ಹೇಗಿದೆಯಪ್ಪ!" ಎಂದು ತಾಯಿ ಕೇಳಿದಳು. "ಅಮ್ಮ, ನಿನಗೆ ತರ್ಕಶಾಸ್ತ್ರವೇ ತಿಳಿಯದು. ಎದುರಿಗಿರುವದೆಲ್ಲ ಚಪಾತಿಯ ಗುಣಗಳೇ ಹೊರತು ಚಪಾತಿಯಲ್ಲ. ನೋಡು, ನಮ್ಮ ಪುಸ್ತಕದಲ್ಲಿ ಏನೆಂತ ಹೇಳಿದೆ : "ಚಕ್ಷುರ್ಮಾತ್ರಗ್ರಾಹ್ಯಗುಣೋ ರೂಪಮ್"– ಎಂದರೆ ಕಣ್ಣಿಗೆ ಮಾತ್ರ ಕಾಣಿಸುವದಿದೆಯಲ್ಲ, ಇದೆಲ್ಲ ರೂಪ ಎಂಬ ಗುಣ. ಹೀಗೆಯೇ ನಾಲಗೆಗೆ ಕಾಣಿಸುವದು ರಸ ಎಂಬ ಗುಣಮಾತ್ರವು. ಇಲ್ಲಿ ಕಾಣಿಸುವ ಗುಣಗಳಿಗೆಲ್ಲ ಆಧಾರವಾಗಿ ದ್ರವ್ಯತ್ವ ಎಂಬ ಜಾತಿಯಿಂದ ಕೂಡಿಕೊಂಡ ಚಪಾತಿ ಎಂಬುದೇ ಬೇರೆಯಿದೆ. ಅದನ್ನು ನೀನು ಅರಿಯೆ" ಎಂದು ಮುಕ್ತಾವಳಿಯಲ್ಲಿ ನಾನು ಓದಿದ್ದ ಲಕ್ಷಣಗಳನ್ನೆಲ್ಲ ಬಿಚ್ಚಿ ಹೇಳುವದಕ್ಕೆ ಹೋದೆನು.

ಅದಕ್ಕೆ ನಮ್ಮ ತಾಯಿ ಬಿಕ್ಕಿಬಿಕ್ಕಿ ಅಳುತ್ತಾ "ಅಯ್ಯೋ ! ನಮ್ಮ ಹುಡುಗನಿಗೆ ಏನೋ ಆಗಿಬಿಟ್ಟಿದೆ ! ಮೊದಮೊದಲು ಜಾಣ ಹುಡುಗ ಅಂತ ಇದ್ದರೆ ಈಗ ಏನೋ ಆಗಿಬಿಟ್ಟ. 'ಬರುಬರುತ್ತಾ ಆಚಾರ್ರ ಕುದುರೆ ಏನೋ ಆಯಿತು' ಎನ್ನುವ ಹಾಗೆ ಈ ಹುಡುಗ ಹೀಗೆ ಏಕೆ ಆದನೋ ಮಹಾಕಾಳಿಯೇ ಬಲ್ಲಳು. ಎಲೆಯ ಮೇಲೆ ಹಾಕಿರುವ ಚಪಾತಿ ಚಪಾತಿಯಲ್ಲವಂತೆ. ಇನ್ನೊಂದು ಬೇರೆ ಚಪಾತಿ ಇದೆಯಂತೆ ! ಹುಚ್ಚು ಹುಡುಗ, ಹೋಗು ; ಆ ಚಪಾತಿಯನ್ನೇ ತಿನ್ನು. ಈ ಹಾಳು ಸಂಸ್ಕೃತ ಇವನನ್ನು ಈ ಗತಿಗೆ ತಂತು!" ಎಂದು ಬಗೆಬಗೆಯಾಗಿ ಲೊಟಗುಟ್ಟುವದಕ್ಕೆ ಮೊದಲುಮಾಡಿದಳು. ಇಷ್ಟು ಹೊತ್ತಿಗೆ ನಮ್ಮ ತಂದೆಯವರೂ ಬಂದರು. ಒಳಗೆ ನಡೆಯುತ್ತಿದ್ದ ಮಾತನ್ನು

ಕೇಳಿ ಅವರಿಗೆ ಪರಮಾನಂದವೂ ಆಶ್ಚರ್ಯವೂ ಆಯಿತು. "ಎಲಾ ಮಗು, ಲಕ್ಷ್ಮಣಾ, ನಿನಗೆ ಮುಕ್ತಾವಳಿಯ ಪಙ್ಕ್ತಿ ಯಾವಾಗ ಬಂತೋ ?" ಎಂದು ಕೇಳಿದರು. ಆಗ ನಾನು ಇದ್ದ ಸಂಗತಿಯನ್ನೆಲ್ಲ ಹೇಳಿದೆನು. ಅವರು "ಭಲೆ ಭಲೆ! ಇಂಥವನಲ್ಲವೆ, ನಮ್ಮ ವಂಶಕ್ಕೆ ಕೀರ್ತಿತರುವ ಹುಡುಗ! ಸರಿ, ಊಟ ಆಗಲಿ; ಈ ದಿವಸವೇ ನವದ್ವೀಪಕ್ಕೆ ಕರೆದುಕೊಂಡುಹೋಗಿ ರಾಮಚಂದ್ರ ವಾಗೀಶಭಟ್ಟಾಚಾರ್ಯರ ಹತ್ತಿರ ಗುರುಕುಲವಾಸಕ್ಕೆ ಬಿಟ್ಟುಬರುತ್ತೇನೆ" ಎಂದು ನಮ್ಮ ತಾಯಿಯ ಕಡೆಗೆ ತಿರುಗಿ "ಎಲೆ, ಸಾಕು, ಸುಮ್ಮನಿರು ; ನಿನಗೇನು ಗೊತ್ತು, ಈ ತರ್ಕದ ಬೆಲೆ ? ಶ್ರೀಸೂರ್ಯನಾರಾಯಣಸ್ವಾಮಿಯ ಕೃಪೆಯಿಂದ ನಮ್ಮ ಹುಡುಗ ಯಾರೂ ಹೇಳದೆಯೆ ತರ್ಕಶಾಸ್ತ್ರವನ್ನು ತನಗೆತಾನೆ ಹೇರಿಕೊಳ್ಳುತ್ತಿದ್ದಾನೆ. ಸರಿಯಾಗಿ ಗುರುಶುಶ್ರೂಷೆಮಾಡಿ ಬಂದ ಅಂದರೆ ನಮ್ಮ ಪ್ರಾಂತ್ಯಕ್ಕೆ ಎರಡನೆಯ **ಗದಾಧರ**❖ ಎನ್ನಿಸಿಕೊಳ್ಳುವದರಲ್ಲಿ ಸಂದೇಹವಿಲ್ಲ. ಇನ್ನು ಬಿಡು, ನಿನ್ನ ಯೋಚನೆಯನ್ನ!" ಎಂದು ಮೈಯುಬ್ಬಿಸಿಕೊಂಡು ಬಹಳ ಹೊತ್ತು ಅದೇ ಮಾತನಾಡುತ್ತ ಕೂತುಕೊಂಡರು. ಕೊನೆಗೆ ಸ್ನಾನಮಾಡಿ ಆಹ್ನಿಕವನ್ನು ಪೂರೈಸಿ ಭೋಜನಮಾಡಿದ ಮೇಲೆ ಸ್ವಲ್ಪ ತಿಂಡಿತೀರ್ಥವನ್ನು ದಾರಿಗೆ ಕಟ್ಟಿಸಿಕೊಂಡು ನನ್ನನ್ನು ಕರೆದುಕೊಂಡು ನವದ್ವೀಪಕ್ಕೆ ಪ್ರಯಾಣೋನ್ಮುಖರಾಗಿ ಹೊರಟೇಬಿಟ್ಟರು!

ನವದ್ವೀಪದಲ್ಲಿ ಆಗಿನ ಕಾಲಕ್ಕೆ ಪಾಠದ ಪದ್ಧತಿ ಹೇಗಿತ್ತೆಂದರೆ: ಭಟ್ಟಾಚಾರ್ಯರು ನನ್ನಂಥ ಹೊಸ ಹುಡುಗರಿಗೆ ಪಾಠಹೇಳುವ ವಾಡಿಕೆಯಿಲ್ಲ; ತೀರ ಪ್ರೌಢಪಾಠವನ್ನು ಓದುತ್ತಿದ್ದ ಒಬ್ಬಿಬ್ಬರಿಗೆ ಮಾತ್ರ ಅವರೇ ನೇರಾಗಿ ಹೇಳುತ್ತಿದ್ದರು. ಮಿಕ್ಕವರು ಬೇರೆಬೇರೆಯ ಹಳೆಯ ವಿದ್ಯಾರ್ಥಿಗಳಲ್ಲಿ ಪಾಠವನ್ನು ಕಲಿಯುತ್ತಿದ್ದರು. ನಮ್ಮ ತಂದೆಯು ನನ್ನನ್ನು ಬಿಟ್ಟು ಹೋದ ಒಂದು ತಿಂಗಳವರೆಗೂ ನನಗೆ ಭಟ್ಟಾಚಾರ್ಯರ ಮುಖಭೇಟಿ ಆಗುವದೇ ಕಷ್ಟವಾಗಿತ್ತು. ಆದರೂ ಅಲ್ಲಿದ್ದ ಕೇಶವಶಾಸ್ತ್ರಿ ಎಂಬ ವಿದ್ಯಾರ್ಥಿಯು ನನಗೆ

❖ ಈತನು ನವೀನತರ್ಕಶಾಸ್ತ್ರದಲ್ಲಿ ವ್ಯಾಖ್ಯಾನಗ್ರಂಥಗಳನ್ನು ಬರೆದಿರುವನಲ್ಲದೆ ಎಷ್ಟೋ ವಾದಗ್ರಂಥಗಳನ್ನೂ ಬರೆದಿರುತ್ತಾನೆ. ಈಗಿನ ತಾರ್ಕಿಕರಲ್ಲಿ ಈತನ ಗ್ರಂಥಗಳಿಗೆ ಬಹುಪೂಜ್ಯತೆಯಿದೆ.

ಮುಕ್ತಾವಳಿ, ರಾಮರುದ್ರಿ, ದಿನಕರಿ– ಮುಂತಾದ ಗ್ರಂಥಗಳನ್ನು ಅಲ್ಲಿಷ್ಟು ಇಲ್ಲಿಷ್ಟು ಹೇಳಿಕೊಡುತ್ತ ಹೋದನು. ಒಂದು ದಿನ ವ್ಯಾಪ್ತಿಯ ಲಕ್ಷಣವನ್ನು ನನಗೆ ಕೇಶವಶಾಸ್ತ್ರಿ ಹೇಳಿಕೊಡುತ್ತಿದ್ದನು. ನನಗೂ ಅವನಿಗೂ ಆ ವಿಷಯದಲ್ಲಿ ವಿವಾದವುಂಟಾಯಿತು. ನಾನು ಸ್ವಲ್ಪವೂ ಹೆದರಿಕೆಯಿಲ್ಲದೆ ಗಟ್ಟಿಯಾಗಿ ಕೂಗಿ ಮಾತನಾಡುತ್ತಿದ್ದೆನು. ಈ ಗದ್ದಲವನ್ನು ಕೇಳಿ ಭಟ್ಟಾಚಾರ್ಯರು ಕೂಡಲೆ ಹೊರಕ್ಕೆ ಬಂದು, "ಎಲಾ, ಯಾವನೋ ಅದು ?" ಎಂದು ನನ್ನ ಕಡೆಗೆ ತಿರುಗಿ "ಸರಿ, ನೀನು ಹೊಸ ಹುಡುಗ ! 'ಮಂತ್ರಕ್ಕಿಂತ ಉಗುಳು ಜೋರು' ಎನ್ನುವಹಾಗೆ ನಿಜವಾದ ಶಾಸ್ತ್ರಜ್ಞಾನಕ್ಕಿಂತ ಗದ್ದಲವನ್ನೇ ಮುಖ್ಯವಾಗಿ ಇಟ್ಟುಕೊಂಡಿರುವಹಾಗೆ ಕಾಣುತ್ತದೆ" ಎಂದರು. ನಾನು ಅದಕ್ಕೂ ಹೆದರದೆ "ಬಟ್ಟೆ ಬೇಕಾದರೆ ಒಗೆಯಬಹುದು, ಕಟ್ಟಿಗೆ ಬೇಕಾದರೆ ಒಡೆಯಬಹುದು ; ಗ್ರಂಥದಲ್ಲಿ ದಾಕ್ಷಿಣ್ಯವೆ, ಗುರುಗಳೆ ? ನೋಡಿ ! ವ್ಯಾಪ್ತಿಯ ಲಕ್ಷಣವನ್ನ ಹೇಗೆ ಹೇಳುತ್ತಾನೆ ! ಇದು ಸರಿಯೆ ?" ಎಂದು ಕೇಳಿದೆನು. ಅವರು "ಹಾಹಾ ! ಈ ಹುಡುಗನಿಗೆ ಆಗಲೆ ಇಷ್ಟು ತರ್ಕ ತಿಳಿಯುತ್ತದೆಯೆ ! ಎಲಾ, ನಾಳೆಯಿಂದ ನೀನು ನನ್ನ ಬಳಿಯಲ್ಲಿಯೇ ಓದು, ನಿನಗೆ ಸಮರ್ಪಕವಾಗಿ ಹೇಳಿಕೊಡುತ್ತೇನೆ" ಎಂದು ಹೇಳಿ ಒಳಕ್ಕೆ ಹೊರಟುಹೋದರು. ಮಾರನೆಯ ದಿನದಿಂದ ನನ್ನ ಆನಂದಕ್ಕೆ ಪಾರವೇ ಇಲ್ಲ. **ಅನುಮಾನಚಿಂತಾಮಣಿಯ*** ಗ್ರಂಥವನ್ನು ಜಾಗದೀಶೀ ಗದಾಧರೀ ವ್ಯಾಖ್ಯಾನಗಳ ಸಮೇತ ಸಾಕ್ಷಾತ್ತಾಗಿ ಭಟ್ಟಾಚಾರ್ಯರೇ ಹೇಳುವದಕ್ಕೆ ಪ್ರಾರಂಭಮಾಡಿದರು. ಅನುಮಿತಿಪ್ರಕರಣ, ಪಂಚಲಕ್ಷಣೀ, ಸಿಂಹವ್ಯಾಘ್ರೀ, ವ್ಯಧಿಕರಣಧರ್ಮಾವಚ್ಛಿನ್ನಾಭಾವಪ್ರಕರಣ, ಪೂರ್ವಪಕ್ಷಪ್ರಕರಣ, ಸಿದ್ಧಾಂತಲಕ್ಷಣಪ್ರಕರಣ, ಅವಚ್ಛೇದಕತ್ವನಿರುಕ್ತಿ, ಸಾಮಾನ್ಯಾಭಾವ, ವಿಶೇಷವ್ಯಾಪ್ತಿ, ಅತ ಏವ ಚತುಷ್ಟಯ, ತರ್ಕಪ್ರಕರಣ, ವ್ಯಾಪ್ತ್ಯನುಗಮ, ಸಾಮಾನ್ಯಲಕ್ಷಣ, ಉಪಾಧಿ, ಪಕ್ಷತಾ,

* ತರ್ಕಶಾಸ್ತ್ರದಲ್ಲಿ 'ಅನುಮಾನಚಿಂತಾಮಣಿ'ಯನ್ನು ಒಂದು ಕ್ರಮದಲ್ಲಿ ಪೂರ ಓದುವ ವಾಡಿಕೆಯು ನಮ್ಮ ದೇಶದಲ್ಲಿಲ್ಲ ; ತರ್ಕಸಂಗ್ರಹ, ಮುಕ್ತಾವಳಿ, ರಾಮರುದ್ರೀಯ, ದಿನಕರೀಯ– ಮುಂತಾದ ಪ್ರಕರಣಗಳನ್ನು ಓದುತ್ತಲೂ 'ಪಂಚಲಕ್ಷಣೀ' ಎಂಬ ಭಾಗವನ್ನು ಪ್ರಾರಂಭಿಸಿಬಿಡುತ್ತಾರೆ. ಇದರಲ್ಲಿ ವ್ಯಾಪ್ತಿಯೆಂದರೇನೆಂಬುದನ್ನು ತಿಳಿಯಿಸುವ ಐದು ಲಕ್ಷಣವಾಕ್ಯಗಳಿದ್ದು ಅದನ್ನು ವಿವರಿಸುವ ವ್ಯಾಖ್ಯಾನವೇ ಮುಖ್ಯವಾಗಿರುವದು.

ಪರಾಮರ್ಶ, ಕೇವಲಾನ್ವಯೀ, ಕೇವಲವ್ಯತಿರೇಕೀ, ಅರ್ಥಾಪತ್ತಿ, ಅವಯವ, ಹೇತ್ವಾಭಾಸ, ಸಾಮಾನ್ಯನಿರುಕ್ತಿ, ಸವ್ಯಭಿಚಾರ, ಸಾಧಾರಣ, ಅಸಾಧಾರಣ, ಅನುಪಸಂಹಾರೀ, ವಿರುದ್ಧ, ಸತ್ಪ್ರತಿಪಕ್ಷ, ಬಾಧ, ಅಸಾಧಕತಾಸಾಧಕತ್ವ, ಈಶ್ವರವಾದ, ಶಕ್ತಿವಾದ, ಮುಕ್ತಿವಾದ– ಇವೇ ಮುಂತಾದ ಗ್ರಂಥಗಳೂ ಭಟ್ಟಾಚಾರ್ಯರ ಮುಖದಿಂದಲೇ ಸಾಕ್ಷಾತ್ತಾಗಿ ನನಗೆ ಪಾಠವಾದವು. ಕೆಲವು ದಿನಗಳು ಮಾತ್ರ ಗ್ರಂಥಗಳನ್ನು ಬರೆದುಕೊಳ್ಳುವದಕ್ಕೆ ಮೊದಲುಮಾಡಿದ್ದೆನು; ಆದರೆ ಬರುಬರುತ್ತ ತರ್ಕಶಾಸ್ತ್ರದ ಶೈಲಿಯು ನನಗೆ ನೀರುಕುಡಿದ ಹಾಗೆ ಆಗಿ ಭಟ್ಟಾಚಾರ್ಯರ ಬಾಯಲ್ಲಿ ಒಂದು ವಾಕ್ಯ ಬಂತೆಂದರೆ ನಾನು ಎರಡು ಹೇಳು ವದಕ್ಕೆ ಮೊದಲುಮಾಡಿದೆನು. ಭಟ್ಟಾಚಾರ್ಯರ ಸಂತೋಷಕ್ಕಂತೂ ಪಾರವೇ ಇರಲಿಲ್ಲ. ಬೆರಳುತೋರಿಸಿದರೆ ಹಸ್ತವನ್ನು ನುಂಗುವಂಥ ಶಿಷ್ಯನು ಸಿಕ್ಕನಲ್ಲ! –ಎಂಬ ಸಂತೋಷದಿಂದ ಅವರು ಎಷ್ಟೋ ದಿನ ಊಟಕ್ಕೆಕೂಡ ಏಳದೆ ಪಾಠ ವನ್ನು ಹೇಳುತ್ತಾ ಕೂತುಕೊಂಡುಬಿಡುತ್ತಿದ್ದರು.

ಇದರಿಂದ ಎರಡು ಸಾಕ್ಷಾತ್ಫಲಗಳು ಉಂಟಾದವು: ಮೊದಲನೆಯದು ಮನೆಯ ಯಜಮಾನಿಗೆ ಕೋಪವುಂಟಾದದ್ದು ; ಎರಡನೆಯದು ಜೊತೆಯ ವಿದ್ಯಾರ್ಥಿಗಳಿಗೆ ಅಸೂಯೆ ಬಂದದ್ದು. ಊಟಕ್ಕೆಕೂಡ ಏಳದೆ ಎಷ್ಟೋ ಹೊತ್ತಾದರೂ ನಾನೂ ಭಟ್ಟಾಚಾರ್ಯರೂ ಅವಚ್ಛೇದಕಾವಚ್ಛಿನ್ನಗಳನ್ನು ಹಾಕಿಕೊಂಡು ತರ್ಕದ ಮಾತುಗಳನ್ನು ಹೊಸೆಯುತ್ತ ಹೋದಹಾಗೆಲ್ಲ, ಅಡಿಗೆಯ ಮನೆಯಲ್ಲಿ ಗುಡುಗಿನ ಶಬ್ದವು ಹೆಚ್ಚಾಗುತ್ತಿತ್ತು. 'ಇವನ ಅವಚ್ಛೇದಕಗಳಿಗೆ ಬೆಂಕಿಹಾಕ! ಇಷ್ಟೊಂದು ಅವಚ್ಛೇದಕಗಳ ಗಡಿಬಿಡಿ ಯನ್ನು ಕೇಳಿಕೊಂಡು ಹಸಿದುಕೊಂಡು ಕೂರುವದಕ್ಕಿಂತ ಅವನನ್ನೇ ಛೇದ ಮಾಡಿದರೆ ಎಷ್ಟೋ ಉತ್ತಮವಾದೀತು!" ಎಂದು ಗುರುಪತ್ನಿಗಳು ನನ್ನ ಕಿವಿಗೆ ಕೇಳುವಹಾಗೆಯೇ ಎಷ್ಟೋ ಸಲ ಗೊಣಗಿಕೊಳ್ಳುತ್ತಿದ್ದರು. 'ಪಾಪ! ಅವರಂತೂ ಹೆಂಗಸರು, ಅವರಿಗೇನು ಈ ಶಾಸ್ತ್ರದ ಸವಿ ತಿಳಿದೀತು?' ಎಂದು ನಾನು ಸಮಾಧಾನವನ್ನು ತಂದುಕೊಳ್ಳುತ್ತಿದ್ದೆನು. ಆದರೆ ಸಹಪಾಠಿಗಳಿಗೆ ಏನು ಬುದ್ಧಿ ಬಂತೊ! ಅವರೆಲ್ಲರೂ ನನಗೆ ಲಕ್ಷಣಪರಿಷ್ಕಾರದಲ್ಲಿ ಇರುವ ಅಭಿರುಚಿಯನ್ನು ಸಹಿಸಲಾರದೆ, ನನಗೆ ತಾಯಿತಂದೆಗಳು ಇಟ್ಟಿದ್ದ 'ಲಕ್ಷ್ಮಣ ಶಾಸ್ತ್ರಿ' ಎಂಬ ಹೆಸರನ್ನು ತಿರಿಚಿ '**ಲಕ್ಷಣಶಾಸ್ತ್ರಿ**'ಯೆಂದು ಕರೆಯುವದಕ್ಕೆ

ನನ್ನ ಹಿಂದುಗಡೆಯಲ್ಲಂತೂ 'ಅವಲಕ್ಷಣಶಾಸ್ತ್ರಿ' ಎಂದೇ ಮಾತನಾಡಿಕೊಳ್ಳ ಹತ್ತಿದರು !

ಇದೆಲ್ಲ ಹಾಗಿರಲಿ, ನಾಯಿ ಕೂಗಿದರೆ ದೇವಲೋಕ ಹಾಳೆ? ಹೇಗೋ ನನ್ನ ಹೆಸರು ಸರ್ವದ್ವೀಪದಲ್ಲೆಲ್ಲ ಪ್ರಸಿದ್ಧಿಯಾಯಿತು. ನನಗೆ ಹಾಸ್ಯಕ್ಕಾಗಿ ನನ್ನ ಸ್ನೇಹಿತರು ಇಟ್ಟಿದ್ದ ಲಕ್ಷಣಶಾಸ್ತ್ರಿ ಎಂಬ ಹೆಸರು ಆ ಊರಲ್ಲೆಲ್ಲ ಹರಡಿತು. ಕೊನೆಗೆ ಒಂದು ದಿನ ನಮ್ಮ ಮಹಾಪಾಠಶಾಲೆಯಲ್ಲಿ ಪರೀಕ್ಷಾ ಸಮಾರಂಭವು ಮೊದಲಾಯಿತು. ಮೊದಮೊದಲು ಪಾಠಶಾಲೆಯಲ್ಲೇನೋ ಅಷ್ಟು ಜನ ಸೇರಿರಲಿಲ್ಲ. ಕೊನೆಗೆ 'ಲಕ್ಷಣಶಾಸ್ತ್ರಿಯ ಪರೀಕ್ಷೆ !' ಎಂದು ಯಾರೋ ಕೂಗಿಕೊಂಡರು. ಅಷ್ಟುಹೊತ್ತಿಗೆ ಬಂತಯ್ಯ, ಜನ ಜುಮ್ಮೆಂತ! ಏನು ಹೇಳಲಿ! ಆ ಸಭಾಮಂಟಪವೆಲ್ಲ ಕಿಕ್ಕಿರಿದುಹೋಯಿತು. ಭಟ್ಟಾಚಾರ್ಯರ ಜೊತೆಯಲ್ಲಿ ಓದಿದವರೆಂದು ಪ್ರಸಿದ್ಧರಾಗಿದ್ದ ಕಾಶೀನಾಥಶಾಸ್ತ್ರಿಗಳೆಂಬವರು ನನ್ನನ್ನು ವಾಚಾಪರೀಕ್ಷೆಮಾಡುವದಕ್ಕೆ ಕೂತರು. ಪಾಪ! ಹಿಂದೆ ನಾನು ಓದಿದ ಗ್ರಂಥಗಳ ಹೆಸರು ಹೇಳುವದಕ್ಕೆ ಮೊದಲುಮಾಡಿದಾಗಲೇ ನಿನಗೆ ತಲೆನೋವು ಬಂದಹಾಗೆ ತೋರಿತು. ಹೀಗಿರುವಲ್ಲಿ ಆ ದಿನ ಪರೀಕ್ಷೆಯಲ್ಲಿ ಕಾಶೀನಾಥಶಾಸ್ತ್ರಿಗಳವರು ಕೇಳಿದ ಪ್ರಶ್ನೆಗಳನ್ನೂ ನಾನು ಅವರಿಗೆ ಕೊಟ್ಟ ಉತ್ತರಗಳನ್ನೂ ವಿಸ್ತಾರವಾಗಿ ಹೇಳುತ್ತಾಹೋದರೆ ನಿನಗೆ ತುಂಬ ಬೇಸರವಾದೀತು. ಆದ್ದರಿಂದ ಆ ಮಾತು ಬೇಡ. ಮುಂದಿನ ಕಥೆಯನ್ನು ಕೇಳು. 'ಚತುರ್ದಶಲಕ್ಷಣಿ'ಯಲ್ಲಿ ಒಂದು ಪ್ರಶ್ನೆಹಾಕಿದರು. ನಾನು ಅದಕ್ಕೆ ನಿಷ್ಕೃಷ್ಟ ಲಕ್ಷಣವಾಕ್ಯವನ್ನು ಉತ್ತರವಾಗಿ ಹೇಳಿದೆನೊ ಇಲ್ಲವೋ, ಎಲ್ಲೆಲ್ಲಿಯೂ ಚಪ್ಪಾಳೆಯ ಸದ್ದು ಕವಿದುಕೊಂಡಿತು. ನನಗೆ ಮೈಬೆವತುಹೋಯಿತು. ಕಾಶೀನಾಥಶಾಸ್ತ್ರಿಗಳೂ ಭಟ್ಟಾಚಾರ್ಯರೂ ಬಂದು ನನ್ನನ್ನು ಬಿಗಿದಪ್ಪಿಕೊಂಡರು. ಆಗ ನನಗೆ ಸಾಕ್ಷಾತ್ ಸ್ವರ್ಗಸುಖವೇ ದೊರಕಿದಂತಾಯಿತು.

ಪರೀಕ್ಷೆಯು ಮುಗಿದ ಮೇಲೂ ಬಹಳ ಹೊತ್ತಿನವರೆಗೆ ಜನರು ಸಭಾಮಂಟಪದಲ್ಲಿ ಅಲ್ಲಲ್ಲಿ ಗುಜುಗುಜು ಮಾತನಾಡುತ್ತಾ ಗುಂಪುಗುಂಪಾಗಿ ನಿಂತುಕೊಂಡೇ ಇದ್ದರು. ಇಂಥ ಸಂದರ್ಭಗಳಲ್ಲಿ ಒಬ್ಬರ ಯೋಗಕ್ಷೇಮವನ್ನೊಬ್ಬರು ವಿಚಾರಿಸುತ್ತಾ ಕಾಲಹಾಕುವದು ವಾಡಿಕೆಯಷ್ಟೆ; ಆ ದಿನ ಮಾತ್ರ ಹಾಗಾಗಲಿಲ್ಲ. ವಿದ್ವಾಂಸರುಗಳು ಅನೇಕರು ಹಸನ್ಮುಖರಾಗಿ ನನ್ನ

ಶ್ಲಾಘನೆಯನ್ನೇ ಮಾಡುತ್ತಿದ್ದರು ; ಎಷ್ಟೋ ಜನ ದೊಡ್ಡಮನುಷ್ಯರು 'ಈ ತರುಣನು ಯಾರು ? ಯಾವ ಊರಿನಿಂದ ಇಲ್ಲಿಗೆ ಪಾಠಕ್ಕೆ ಬಂದಿದ್ದಾನೆ ? ಇವನ ಸಂಬಂಧಿಗಳು ಇಲ್ಲಿ ಯಾರಿದ್ದಾರೆ ?' ಎಂದುಮುಂತಾಗಿ ವಿಚಾರಿಸುತ್ತಾ ನನ್ನ ಬಳಿಗೆ ಬಂದು 'ಬಹಳ ಸಂತೋಷವಯ್ಯ, ನಮ್ಮೂರಿನ ವಿದ್ಯಾಪೀಠಕ್ಕೆ ಈಗ ಕಳೆ ಬಂತು !' ಎಂದು ಮುಂತಾಗಿ ಕೊಂಡಾಡಿದರು.

ನವದ್ವೀಪದಲ್ಲಿ ಪಾಠವೆಲ್ಲ ಸಾಂಗವಾದ ಮೇಲೆ ನಾನು ನಮ್ಮ ಊರಿಗೆ ಬಂದೆನು. ನನ್ನ ಕೈಗೆ ವಿದ್ವತ್ತಿನ ಗುರುತಾಗಿ ಕಟ್ಟಿದ ಬಂಗಾರದ ಗಂಟೆ, ಹೊದಿಸಿದ್ದ ಜರತಾರಿಶಾಲು, ಸನ್ಮಾನಪತ್ರದಲ್ಲಿ ಬರೆದುಕೊಟ್ಟಿದ್ದ **'ಅದ್ವಿತೀಯತಾರ್ಕಿಕಸಿಂಹ, ಲಕ್ಷಣಶಾಸ್ತ್ರಿಗೆ'** ಎಂಬ ಸುವರ್ಣಾಕ್ಷರಗಳ ಪಾರಿತೋಷಿಕಲೇಖನ– ಇವುಗಳನ್ನೆಲ್ಲ ನೋಡಿ ನಮ್ಮ ತಂದೆ ಹಿರಿಹಿರಿ ಹಿಗ್ಗಿದ್ದು ಹಾಗಿರಲಿ, ತರ್ಕಶಾಸ್ತ್ರದ ಗಂಧವೇ ಇಲ್ಲದ ನಮ್ಮ ತಾಯಿಯೂ ಉಬ್ಬಿಹೋದಳು. [illegible] ಷ್ಪಗಳನ್ನು ಸುರಿಸುತ್ತ ನನ್ನ ಮೈಕೈ ಸವರಿ 'ಏಳು ಊಟಕ್ಕೆ !' ಎಂದು ಎಬ್ಬಿಸಿದಳು. ಅಂದಿನಿಂದ ನನಗೆ ತುಪ್ಪ, ಸಕ್ಕರೆ, ಚಪಾತಿ– ಇವುಗಳು ಸಾಮಾನ್ಯ ಊಟವಾದವು. ಲಾಡು, ಬರ್ಫಿ, ಪೇಣೆ. ಫೀರನ್. ಜಹಾಂಗೀರ್– ಮುಂತಾಗಿ ಒಂದಿಲ್ಲದಿದ್ದರೆ ಒಂದು ಭಕ್ಷ್ಯವು ನನ್ನ ತಟ್ಟೆಯಲ್ಲಿ ಇದ್ದೇಇರುತ್ತಿದ್ದಿತು. ಸಂಪಿಗೆ ಎಣ್ಣೆ, ಮಲ್ಲಿಗೆ ಎಣ್ಣೆ– ಮುಂತಾದವುಗಳನ್ನು ಹಾಕಿ, ತಲೆತಟ್ಟಿ ಎರಡು ದಿವಸಕ್ಕೊಂದು ಸಲ ನನಗೆ ಅಭ್ಯಂಗನವನ್ನು ಮಾಡಿಸುತ್ತಿದ್ದರು. ಮಂಚದ ಮೇಲೆ ಲೇಪು ದಿಂಬೂ ಹಾಕಿ ಕೂರಿಸುತ್ತಿದ್ದರು. ಹೆಚ್ಚೇನು ? ಹಾಲಿನಲ್ಲಿ ಮೊಸರಿನಲ್ಲಿ ಕೈತೊಳೆಯಿಸುತ್ತ ನನ್ನನ್ನು ಅಂಗೈಯಲ್ಲಿಟ್ಟು ಮುಂಗೈಯಲ್ಲಿ ಮುಚ್ಚಿ ಗಿಣಿಯ ಹಾಗೆ ಸಾಕುತ್ತಾ ಬಂದರು.

**"ಯೌವನಂ ಧನಸಂಪತ್ತಿಃ ಪ್ರಭುತ್ವಮವಿವೇಕಿತಾ ।**
**ಏಕೈಕಮಪ್ಯನರ್ಥಾಯ ಕಿಮು ಯತ್ರ ಚತುಷ್ಟಯಮ್ ॥"**

(ಭಾವಾರ್ಥ :— ಯೌವನ, ಧನದ ಸಂಪತ್ತು, ಅಧಿಕಾರ, ಅವಿವೇಕ —ಇವು ಒಂದೊಂದಿದ್ದರೆ ಸಾಕು, ಎಷ್ಟೋ ಅನರ್ಥವಾಗುವದು. ಇನ್ನು ಈ ನಾಲ್ಕೂ ಸೇರಿದ್ದರೆ ಹೇಳಬೇಕಾದದ್ದೇನು ?)

ಎಂದು ಒಬ್ಬ ಸುಭಾಷಿತಕಾರನು ಹೇಳಿರುತ್ತಾನಲ್ಲವೆ? ನನ್ನ ವಿಷಯದಲ್ಲಿ ಯೌವನವೂ ಧನಸಂಪತ್ತಿಯೂ ಇಷ್ಟುಹೊತ್ತಿಗೆ ಕೂಡಿದಹಾಗಾಗಿತ್ತು. ನಮ್ಮ ಜಮೀನ್ದಾರಿಯಲ್ಲಿ ಇದ್ದ ಎಷ್ಟೋ ಜನ ರೈತರ ಮೇಲೆ ನಾವೇ ಪ್ರಭುಗಳಾಗಿದ್ದರಿಂದ ಪ್ರಭುತ್ವವೂ ಇತ್ತೆಂದು ಭಾವಿಸಬಹುದು. ತರ್ಕಶಾಸ್ತ್ರದ ಪಾಂಡಿತ್ಯವು ನನಗೆ ಬಂದಾಗಿನಿಂದ ಅವಿವೇಕತ್ವವೂ ನನಗೆ ಗೊತ್ತಿಲ್ಲದೆಯೇ ನನ್ನಲ್ಲಿ ಅಂಕುರಿಸಿ ಬೆಳೆಯುತ್ತಬಂದಿತ್ತು. ಅದು ಈಗ ಗಿಡವಾಗಿ ಮರವಾಗಿ ಕೊಂಬೆರೆಂಬೆಗಳಾಗಿ ಬೆಳೆದು ಚಿಗುರಿ ಹೂಬಿಟ್ಟು ಫಲಕೊಟ್ಟಿತೆನ್ನಬಹುದು. ಏಕೆಂದರೆ ಸುತ್ತುಮುತ್ತಲೂ ತರ್ಕವನ್ನು ಓದಿದ್ದ ಪಂಡಿತರು ಅಷ್ಟೇನೂ ಇರಲಿಲ್ಲವಾದರೂ ಇದ್ದ ಅಲ್ಪಸ್ವಲ್ಪ ಶಾಸ್ತ್ರಿಗಳನ್ನೇ ನಾನು ಹುಡುಕಿ ಅವರನ್ನು ಕೆಣಕಿಕೊಂಡು ವಾದವಿವಾದಕ್ಕೆ ಹೋಗುತ್ತಲೂ 'ಅವ್ಯಾಪ್ತಿ', 'ಅತಿವ್ಯಾಪ್ತಿ', 'ಅಸಂಭವ'— ಎಂದು ಅವರು ಹೇಳುವ ಲಕ್ಷಣಗಳಲ್ಲೆಲ್ಲ ತಪ್ಪುಗಳನ್ನು ಹೊರಹಾಕುತ್ತಲೂ ಅವರನ್ನೆಲ್ಲ ವಾಕ್ಯಾರ್ಥದಲ್ಲಿ ಪೆಚ್ಚುಮಾಡಿಬಿಡುತ್ತಿದ್ದೆನು. ದಿನದಿನಕ್ಕೆ ಈ ನನ್ನ ತರ್ಕದ ಹಾವಳಿಯು ಹೆಚ್ಚಾಗುತ್ತಹೋಯಿತು. ಪಂಡಿತರೆಲ್ಲರೂ ಜೋಲುಮುಖಹಾಕಿಕೊಂಡು ಉಸಿರೆತ್ತದೆ ನನಗೆ ಜಯಪತ್ರವನ್ನು ಬರೆದುಕೊಡುತ್ತಿದ್ದರು. ಬಂಗಾಳಪ್ರಾಂತ್ಯದಲ್ಲಿ ನಡೆಯುವ ಸಭೆಗಳಲ್ಲೆಲ್ಲ ತರ್ಕಶಾಸ್ತ್ರವೆಂದರೆ ಲಕ್ಷಣಶಾಸ್ತ್ರಿಗೇ ಮೀಸಲಾಗಿತ್ತು. ನಾನು ಸಭೆಗೆ ಹೋಗಲಿ, ಹೋಗದಿರಲಿ, 'ಲಕ್ಷಣಶಾಸ್ತ್ರಿಪೀಠ' ಎಂಬ ಹೆಸರಿನಿಂದ ಒಂದು ಪೀಠವನ್ನು ಉಚ್ಚಸ್ಥಾನದಲ್ಲಿ ಗೌರವಕ್ಕಾಗಿ ಇಟ್ಟುಬಿಡುತ್ತಿದ್ದರು. ನನಗೆ ಅಗ್ರತಾಂಬೂಲವನ್ನು ತೆಗೆಯದೆ ತರ್ಕಶಾಸ್ತ್ರದ ವಾಕ್ಯಾರ್ಥಗಳಲ್ಲಿ ಮಾತೆತ್ತುವದಕ್ಕೆ ಯಾರಿಗೂ ಬಾಯಿಲ್ಲದ ಹಾಗಾಯಿತು. ಹೀಗೆಲ್ಲ ಇರುವಾಗ ನನಗೆ ಬ್ರಾಹ್ಮಣರ ತೇಜೋವಧೆ ಎಂಬುದು ಮನಸ್ಸಿಗೆ ಹತ್ತೀತೆ? ಎಷ್ಟು ಜನ ಪಂಡಿತರುಗಳ ಮುಖಕ್ಕೆ ನನ್ನಿಂದ ಮಸಿ ಬಳಿದುಹೋಯಿತೋ, ಎಷ್ಟು ಜನ ವಯೋವೃದ್ಧರಿಗೂ ಜ್ಞಾನವೃದ್ಧರಿಗೂ ಅಪಮಾನವಾಯಿತೋ, ಅದರ ಲೆಕ್ಕವನ್ನೇನೂ ನಾನು ಇಡಲಿಲ್ಲ.

ಆದರೆ ನಾನು ಮರೆತರೂ ದೇವರು ಈ ಲೆಕ್ಕವನ್ನು ಮರೆಯಲಿಲ್ಲ. ನನ್ನ ವಿದ್ಯಾಮದಕ್ಕೆ ಸ್ವಲ್ಪ ಚುಟುಗೆಹಾಕುವದು ಆವಶ್ಯಕವೆಂದು ಆ ಪರಮೇಶ್ವರನ ಸಂಕಲ್ಪಕ್ಕೆ ಬಂತೆಂದು ತೋರುತ್ತದೆ. ಈ ವಿಷಯವು ನಿನಗೆ ಮುಂದಿನ

ವೃತ್ತಾಂತವನ್ನು ಕೇಳಿದ ಮೇಲೆ ತಾನೇ ಗೊತ್ತಾಗುವದು. ಅದಿರಲಿ, ಆಗಿನ ಕಾಲದ ನನ್ನ ದಿನಚರಿಯನ್ನು ಹೇಳುತ್ತೇನೆ ಕೇಳು. ತರ್ಕಶಾಸ್ತ್ರದ ವಾಕ್ಯಗಳು ದಿನವೂ ಹೇಳಿಕೊಳ್ಳದೆ ಇದ್ದರೆ ನಿಲ್ಲುವಹಾಗಿಲ್ಲ. ಎಷ್ಟೋ ವಾಕ್ಯಗಳು 'ಪ್ರಕಾರತಾ', 'ನಿರೂಪಿತ', 'ಅವಚ್ಛಿನ್ನ', 'ಪರ್ಯಾಪ್ತ'- ಮುಂತಾದ ಮೂರುನಾಲ್ಕು ಸಲ ಜಪವಾಗುತ್ತಿರುವ ಮಾತುಗಳ ಪೋಣಿಕೆಯಿಂದ ಕಾಶಿಯಿಂದ ರಾಮೇಶ್ವರದವರೆಗೂ ಹೋಗಿರುತ್ತವೆ. ಆದ್ದರಿಂದ ಎಂಥ ಪಂಡಿತರಿಗಾದರೂ ಇವು ಕವಲೊಡೆದು ಚಕ್ರಭೀಮನ ಕೋಟೆಯೊಳಗೆ ಹೊಕ್ಕ ಹಾಗೆ ಭ್ರಮಣೆಯನ್ನು ಉಂಟುಮಾಡುತ್ತವೆ. ಇದಕ್ಕೋಸ್ಕರವಾಗಿ ತರ್ಕಶಾಸ್ತ್ರದ ಪಂಡಿತರೆಲ್ಲ ಬೆಳಗಿನ ಜಾವ ನಾಲ್ಕುವರೆ ಗಂಟೆಗೆ ಎದ್ದು ಒಂದು ಸಲ ಆದಷ್ಟು ಭಾಗದ ಗ್ರಂಥವನ್ನು ಉದಯವಾಗದಂತೆ ಹೇಳಿಕೊಳ್ಳುತ್ತಾರೆ. ಇದೇ ಪದ್ಧತಿಯನ್ನು ನಾನೂ ಅನುಸರಿಸಿದೆನು. ನಾನು ಹಿಂದೆ ಹೇಳಿದ ಜಾಗದೀಶೀ, ಗಾದಾಧರೀ ಗ್ರಂಥಗಳ ಮೇಲೆ 'ಕ್ರೋಡಪತ್ರಗಳು' ಎಂಬ ಹೆಸರಿನಿಂದ ಅತಿ ರಹಸ್ಯವಾದ ವಾದಗ್ರಂಥಗಳು ಹುಟ್ಟಿರುತ್ತವೆ. ಅವುಗಳನ್ನು ಗುರುಪರಂಪರೆಯಿಂದಲೇ ತಿಳಿದುಕೊಳ್ಳಬಹುದೇ ಹೊರತು ಬೇರೆಯ ಮಾರ್ಗದಿಂದ ಅವು ಹೊರಕ್ಕೆ ಬರುವಹಾಗಿಲ್ಲ. ನಮ್ಮ ಭಟ್ಟಾಚಾರ್ಯರು ನನ್ನ ಮೇಲಿನ ಪ್ರೇಮದಿಂದ ಪೂರ್ಣವಾಗಿ ಅನುಗ್ರಹಿಸಿಕೊಟ್ಟಿದ್ದ ಇಂಥ ಕ್ರೋಡಪತ್ರಗಳು ನನ್ನ ವಶದಲ್ಲಿದ್ದವು. ನಾನು ಇವುಗಳನ್ನು ಬೆಳಗಿನ ಜಾವದಲ್ಲಿ ಆವೃತ್ತಿಮಾಡಿ ಗರಡಿಯ ಸಾಧನೆಯನ್ನು ಮಾಡಿಕೊಂಡು ಗಂಗಾನದಿಗೆ ಸ್ನಾನಕ್ಕೆ ಹೋಗಿ ಆಹ್ನಿಕವನ್ನೆಲ್ಲ ಪೂರೈಸಿಕೊಂಡು ಬಂದ ಮೇಲೆ ಅಚ್ಚೇರು ಹಸುವಿನಹಾಲು ಕುಡಿದು ಮತ್ತೆ ಪಂಚಲಕ್ಷಣೀ, ಸಿದ್ಧಾಂತಲಕ್ಷಣೀ- ಇವುಗಳ ಪಾರಾಯಣವನ್ನೇ ಮಾಡುತ್ತಿದ್ದೆನು. ಊಟವಾದ ಮೇಲೆ ಮತ್ತೆ ಯಾವದಾದರೊಂದು ವಾದಗ್ರಂಥವನ್ನು ಹೇಳಿಕೊಂಡು ತುಸುನಿದ್ದೆಮಾಡಿ, ಇಳಿಹೊತ್ತಿನ ತಿಂಡಿ ಸಿದ್ಧವಾಗುವ ಹೊತ್ತಿಗೆ ಮತ್ತೊಂದು ವಾದಗ್ರಂಥವನ್ನು ನೋಡಿ ಸಾಯಂಕಾಲ ಅಡ್ಡಾಡುವದಕ್ಕೆ ಹೋಗುವಾಗಲೂ ಬಾಯಿಯಲ್ಲಿ ಯಾವದಾದರೊಂದು ತರ್ಕಗ್ರಂಥವನ್ನು ಅನುವಾದಮಾಡಿಕೊಳ್ಳುತ್ತಾಹೋಗುತ್ತಿದ್ದೆನು. ರಾತ್ರೆ ಊಟವಾದ ಮೇಲೆ ಒಂದು ವಾದವನ್ನುಹೇಳಿಕೊಂಡು ನಿದ್ರೆಮಾಡುತ್ತಿದ್ದೆನು. ಬುದ್ಧಿ ಮಂಕಾದ ಹಾಗೆ ಕಂಡು ತರ್ಕಪಾಠಕ್ಕೆ ಅಡ್ಡಿಯಾದರೆ ಒಂದೊಂದು ಸಲ ಭಂಗಿಯನ್ನು ಸೇದಿ ಚುರುಕುಮಾಡಿಕೊಳ್ಳುತ್ತಿದ್ದೆನು. ಇದು ನನ್ನ ದಿನಚರಿ. ವರುಷ

ದೊಳಗಾಗಿ ಎಲ್ಲಾದರೂ ಒಂದು ಐವತ್ತು ಸಭೆಗಳೂ ಒಂದು ಇಪ್ಪತ್ತು ವಾಕ್ಯಾರ್ಥಗಳೂ ಆಗುತ್ತಿದ್ದವು. ಆಗ ಜಿಂಕೆಗಳ ಮೇಲೆ ಬೀಳುವ ಹುಲಿಯು ಹಾಗೆ ಬಡಪಾಯಿಗಳಾದ ಪಂಡಿತರ ಮೇಲೆ ಬಿದ್ದು ಆ ಪ್ರಾಂತ್ಯದ ಪಂಡಿತ ರನ್ನೆಲ್ಲ ಪುಡಿಪುಡಿಮಾಡುತ್ತಿದ್ದೆನು!

ಒಂದು ದಿನ ಬೆಳಗಿನಜಾವದಲ್ಲಿ ಎಂದಿನಂತೆ ಕ್ರೋಡಪತ್ರವನ್ನು ಹೇಳಿ ಕೊಳ್ಳುತ್ತಾ ಕೂತಿದ್ದೇನೆ; ಅದೇಕೋ, ಹೇಳುತ್ತ ಹೇಳುತ್ತ ಕಣ್ಣು ಬಿಗಿಯುವ ದಕ್ಕೆಹತ್ತಿತು. ಆದರೂ ಕಣ್ಣು ಮುಚ್ಚಿಕೊಂಡೇ ವಾಕ್ಯಗಳನ್ನ ಅಂದುಕೊಳ್ಳುತ್ತಾ ಇದ್ದೆ. ಹೇಳುತ್ತಲೇ ಇದೇನೆ, ಅದೇನೋ ನನ್ನ ಕೊರಳಿಗೆ ಒಂದು ಹಗ್ಗ ಕಟ್ಟಿದ ಹಾಗೆ ಭಾಸವಾಯಿತು. ಇದೇನಿರಬಹುದೆಂದು ಕೈಯನ್ನ ಆ ಕಡೆಗೆ ಚಾಚುವದಕ್ಕೆ ಹೋದರೆ ಕೈಯೇ ಬರಲಿಲ್ಲ. ಇದೇಕೆಂದು ಆಶ್ಚರ್ಯದಿಂದ ಕಣ್ಣು ಬಿಟ್ಟು ನೋಡು ತ್ತೇನೆ, ನಾನು ಏನುಹೇಳಲಿ! ನಿಜವಾಗಿಯೂ ನನ್ನ ಕೊರಳಿಗೆ ಹಗ್ಗವನ್ನು ಕಟ್ಟಿಯೇ ಇದೆ! ನನ್ನ ಕೈಗಳನ್ನು ನೋಡಿದರೆ ಕುದುರೆಯ ಕತ್ತೆಯ ಕಾಲುಗಳ ಹಾಗೆ ಎರಡರಲ್ಲಿಯೂ ಉಂಡೆಗೊರಸು ಕಾಣುತ್ತಾ ಇದೆ!! ಹೊಟ್ಟೆಯ ಕಡೆಗೆ ನೋಡಿಕೊಳ್ಳುತ್ತೇನೆ, ಮನುಷ್ಯತ್ವದ ಚಿಹ್ನೆಯೇ ಇಲ್ಲ!!! ನನಗೆ ಎಂಥಾ ಗಾಬರಿ ಯಾಗಿರಬೇಕು! ನೀನೇ ಯೋಚಿಸಿನೋಡು. ನನಗೆ ಏನೂ ತೋಚದೆ ಹೋಯಿತು. ಏನೋ ಪ್ರಮಾದವಾಗಿರಬೇಕು- ಎಂದು ಗಟ್ಟಿಯಾಗಿ ಕಿರಿಚಿ ಕೊಂಡೆನು. ಆದರೆ ನನ್ನ ದೌರ್ಭಾಗ್ಯವನ್ನು ಏನೆಂದು ಹೇಳಬೇಕು! ಆ ಶಬ್ದ ಮನುಷ್ಯಶಬ್ದವಾಗಿರಲಿಲ್ಲ; ಒಂದು ಒಳ್ಳೆ ಕುದುರೆಯು ಕೆನೆಯುವ ಹಾಗೆ ಕೇಳಿಸಿತು. ನನಗೆ ಇನ್ನೂ ದಿಗ್ಭ್ರಮೆಯಾಗಿ ಮೇಲಕ್ಕೆದ್ದು ನಿಂತೆನು. ಏನು ಹೇಳುವದು! ನಾನು ನಿಜವಾಗಿಯೂ ಕುದುರೆಯೇ ಆಗಿಬಿಟ್ಟಿದ್ದೇನೆ! ಹಿಂದು ಗಡೆ ಬಾಲ! ಮೇಲುಗಡೆ ಕಿವಿಗಳು ಎರಡೂ ಅಲ್ಲಾಡುತ್ತಿವೆ! ಕೊರಳಿನ ಮೇಲಿಂದ ಕೇಸರ ಜೋತುಬಿದ್ದಿದೆ! ಕೊರಳಿಗೆ ದಪ್ಪನಾದ ನೀಲಿಬಿಳುಪು ಹಸುರು ಬಣ್ಣದ ಗಾಜಿನ ಮಣಿಗಳ ಸರ ಒಂದು ಹಾಕಿದೆ, ಹಣೆಯ ಮೇಲೆ ಏನೋ ಜುಲ್ಪಿ ಇಳಿಬಿದ್ದಿದೆ!! ಹೊರಗಡೆಗೆ ಕಣ್ಣು ಹಾಕಿ ನೋಡಿದರೆ ನಾನು ನಮ್ಮ ಮನೆಯ ಉಪ್ಪರಿಗೆಯ ಮೇಲಿಲ್ಲ, ಒಂದು ರೈಲುಗಾಡಿಯ ವ್ಯಾಗನ್ನಿನಲ್ಲಿ ನಿಂತಿದ್ದೆನು!!!"

## ೫

ವಾಚಕರೆ, ಸಂನ್ಯಾಸಿಗಳು ಕತೆಯನ್ನು ಮೇಲೆ ಹೇಳಿದಷ್ಟಕ್ಕೆ ತಂದು ಬಿಡಲು ನನಗೆ ಏನೇನೋ ಯೋಚನೆಗಳು ತೋರುವದಕ್ಕೆ ಪ್ರಾರಂಭಿಸಿದವು. 'ಇವರು ಹೇಳುವ ಕಥೆಯೆಲ್ಲ ನಿಜವಾಗಿರಬಹುದೆ? ಮನೆಯಲ್ಲಿ ತರ್ಕವಾದಗಳನ್ನು ಗಟ್ಟಿಮಾಡಿಕೊಳ್ಳುತ್ತಿದ್ದ ಬ್ರಾಹ್ಮಣನು ರೈಲಿನಲ್ಲಿ ಕುದುರೆಯಾಗಿ ನಿಲ್ಲುವದೆಂದರೆ ಏನರ್ಥ? ಹೀಗೆಲ್ಲ ಹೇಳಿದರೆ ನಾನೇನೆನ್ನುವೆನೋ ನೋಡೋಣವೆಂದು ಈ ಯತೀಶ್ವರರು ಇಂಥ ಕಾಗಕ್ಕನ ಕಥೆಯನ್ನು ತೆಗೆದಿರಬಹುದೆ? ಅಥವಾ ಎಷ್ಟೋ ದಿವಸಗಳಿಂದ ಊಟವನ್ನೇ ಬಿಟ್ಟಿರುವ ಇವರಿಗೆ ಪಿತ್ತಭ್ರಮಣೆಯೇನಾದರೂ ಆಗಿರಬಹುದೋ?' ಎಂದು ನನ್ನಲ್ಲಿ ನಾನು ಯೋಚಿಸಿಕೊಳ್ಳುತ್ತಿದ್ದೆನು. ಆದರೆ ಇಷ್ಟರಲ್ಲಿ ಆ ಯತೀಶ್ವರರು ನನ್ನನ್ನು ಬೆನ್ನುತಟ್ಟಿ ಇಂತೆಂದರು :

“ಏನಪ್ಪಾ, ನಾನು ಹೇಳಿದ್ದೆಲ್ಲ ನಿನಗೆ ತಮಾಷೆಯಾಗಿ ತೋರುತ್ತದೆಯೇನೋ. ಆ ದಿನ ನನಗೆ ಬಂದ ಸ್ಥಿತಿ ನಿನಗೆ ಒಂದು ಕ್ಷಣವಾದರೂ ಬಂದಿದ್ದರೆ ಆಗ ನಿನಗೆ ಹೀಗೆ ತೋರುತ್ತಿರಲಿಲ್ಲ. ಇರಲಿ, ಮುಂದಿನ ಸಮಾಚಾರವನ್ನು ಕೇಳು. ಬೇಕಾದರೆ ನಂಬು. ಬೇಡದೆ ಇದ್ದರೆ ಬಿಡು. ನಾವೇನೋ ಸಂನ್ಯಾಸಿಗಳು. ಇದ್ದದ್ದು ಇದ್ದಹಾಗೆಯೇ ಹೇಳಬೇಕಲ್ಲವೆ? ಅದ್ದರಿಂದ ಮುಂದೆ ನಡೆದದ್ದನ್ನು ನಡೆದಹಾಗೆ ಹೇಳಿಬಿಡುತ್ತೇನೆ. ಈ ರೀತಿ ನಾನು ಹೇಗೋ ಕುದುರೆಯಾಗಿ ರೈಲುಗಾಡಿಯೊಳಗೆ ಸೇರಿರುತ್ತೇನೆಂದು ತಿಳಿದ ಮೇಲೆಯೂ ನನಗೆ ನವದ್ವೀಪಕ್ಕೆ ಹೋದದ್ದು, ತರ್ಕದಲ್ಲಿ ಮಾನಪತ್ರವನ್ನು ಪಡೆದದ್ದು, ಬಂಗಾಳದಲ್ಲಿ ಸಭೆಗಳಲ್ಲಿ ವಾಕ್ಯಾರ್ಥಮಾಡಿದ್ದು- ಇವುಗಳೆಲ್ಲ ನೆನಪಿನಲ್ಲಿ ಇದ್ದೇ ಇದ್ದವು. ರೈಲು ವೇಗವಾಗಿ ಹೋಗುತ್ತಿದ್ದ ಹಾಗೆ ಗಡಗಡ ಎಂದು ಶಬ್ದವಾಗುವದುಂಟಷ್ಟೆ? ನನಗೆ ಆ ಶಬ್ದದಲ್ಲಿಯೂ ತರ್ಕದ ಪಙ್ಕ್ತಿಗಳೇ ಕೇಳಬರುತ್ತಿದ್ದವು. ಒಂದು ಸಲ ನನಗೆ ಕೇಳಿಬಂದ ಪಙ್ಕ್ತಿಯನ್ನು ಹೇಳುತ್ತೇನೆ ಕೇಳು :—

**“ಏವಂ ಚ ಶುದ್ಧಪರ್ವತತ್ವಾವಚ್ಛಿನ್ನೋದ್ದೇಶ್ಯತಾನಿರೂಪಿತಶುದ್ಧಸಂಯೋಗಸಮ್ಬನ್ಧಾವಚ್ಛಿನ್ನಶುದ್ಧವಹ್ನಿತ್ವಾವಚ್ಛಿನ್ನವಿಧೇಯತಾಕಾನುಮಿತಿತ್ವಾವಚ್ಛಿನ್ನಂ ಪ್ರತಿಪರ್ವತತ್ವಾವಚ್ಛಿನ್ನ**

ವಿಶೇಷ್ಯತಾನಿರೂಪಿತಸಂಯೋಗಸಂಸರ್ಗಾವಚ್ಛಿನ್ನವಹ್ನಿತ್ವಾವಚ್ಛಿನ್ನಪ್ರಕಾರಿತಾಶಾಲಿನಿಶ್ಚಯತ್ವಾವಚ್ಛಿನ್ನಪ್ರತಿಬನ್ಧಕತಾಕ ಸಂಶಯೋ ಹೇತುರಿತಿ ಪರ್ಯವಸಿತಮ್ ||"

ಆಹ! ಪಕ್ಷತಾಗ್ರಂಥದ ಈ ವಾಕ್ಯವನ್ನು ಕೇಳಿ ನನಗೆ ಏಕಕಾಲಕ್ಕೆ ಎಷ್ಟು ಸಂತೋಷವೂ ದುಃಖವೂ ಆಯಿತೋ! ಅದು ಬೇರೆಯವರಿಗೆ ಹೇಗೆ ತಿಳಿಯಬೇಕು! ಇನ್ನೂ ಈ ಪಙ್ಕ್ತಿಗಳು ಕಿವಿಯಲ್ಲಿ ಈಗಲೂ ಕೇಳಬರುತ್ತಿವೆಯೋ ಎನ್ನುವ ಹಾಗೆಯೇ ಇವೆಯಲ್ಲ!- ಎಂಬ ಸಂತೋಷ; ಇನ್ನುಮೇಲೆ ಇಂಥ ಮುದ್ದು ಮಾತುಗಳು ನನ್ನ ಬಾಯಲ್ಲಿ ಬರುವವಕ್ಕಿಲ್ಲವಲ್ಲ!- ಎಂಬ ದುಃಖ. ಈ ವಿಷಯವನ್ನು ನಾನು ಯೋಚಿಸಿಕೊಳ್ಳುತ್ತಿರುವಹಾಗೆಯೇ ರೈಲು ಮುಂದಕ್ಕೆ ನಡೆಯಿತು. ರೈಲು ಟಕ್ಕಟಕ್ಕ! -ಎನ್ನುತ್ತಿದ್ದರೆ ಎಷ್ಟೋ ಜನರಿಗೆ ಬೇಸರವಾಗುತ್ತದೆ, ನನ್ನ ಸ್ನೇಹಿತ ಕೇಶವಶಾಸ್ತ್ರಿಗೆ ರೈಲುಸದ್ದು ಕೇಳಿದರೆ ತಲೆನೋವು ಬರುತ್ತದೆಯಂತೆ. ಆ ದಿನ ನನಗೆ ಮಾತ್ರ ಹಾಗಿರಲಿಲ್ಲ. ಕಿವಿಗೆ ಏನು ಇಂಪು! ಸದ್ದುಗಳೆಲ್ಲ ತರ್ಕದ ಪಙ್ಕ್ತಿಗಳೇ! ಸ್ವಲ್ಪ ಕಿವಿಗೊಟ್ಟು ಕೇಳಿದೆ; ಅಕೊ, ಆಗಲೇ ಕೃಷ್ಣಂಭಟ್ಟೀಯದ ಪಙ್ಕ್ತಿ!

"ಪ್ರಕೃತಪಕ್ಷತಾವಚ್ಛೇದಕಾವಚ್ಛಿನ್ನೋದ್ದೇಶ್ಯತಾನಿರೂಪಿತ ಸಾಧ್ಯತಾವಚ್ಛೇದಕಸಮ್ಬನ್ಧಾವಚ್ಛಿನ್ನಪ್ರಕೃತಸಾಧ್ಯತಾವಚ್ಛೇದಕಾವಚ್ಛಿನ್ನವಿಧೇಯತಾಕಾನುಮಿತೌ ಪ್ರಕೃತಪಕ್ಷತಾವಚ್ಛೇದಕಾವಚ್ಛಿನ್ನವಿಶೇಷ್ಯತಾನಿರೂಪಿತಸಾಧ್ಯತಾವಚ್ಛೇದಕಸಮ್ಬನ್ಧಾವಚ್ಛಿನ್ನಪ್ರಕೃತಸಾಧ್ಯತಾವಚ್ಛೇದಕಾವಚ್ಛಿನ್ನಪ್ರಕಾರಿತಾಶಾಲಿನಿಶ್ಚಯತ್ವವ್ಯಾಪಕಪ್ರತಿಬನ್ಧಕತಾಕಸಂಶಯೋ ಹೇತುಃ"

ಆಹ! ಏನು ವಾಕ್ಯಸರಣಿ! ಆ ನನ್ನ ಪುಸ್ತಕಗಳೆಲ್ಲ ಎಲ್ಲಿವೆಯೊ, ಆ ಕ್ರೋಡಪತ್ರಗಳಿಗೆ ಇನ್ನೇನು ಗತಿಯೊ! ನವದ್ವೀಪದ ಪಂಡಿತರು ಯಾರಾದರೂ ನನ್ನನ್ನು ವಿಚಾರಿಸಿದರೆ ನಾನು ಇದ್ದಕ್ಕಿದ್ದಹಾಗೆಯೇ ಮಾಯವಾದೆನೆಂದು ಏನೇನಂದುಕೊಳ್ಳುವರೊ!"-ಎಂದು ವಿಧವಿಧವಾಗಿ ಯೋಚಿಸಿಕೊಳ್ಳುತ್ತಿದ್ದೆನು.

ಇಷ್ಟರಲ್ಲಿ ನನಗೊಂದು ಯೋಚನೆ ಹೊಳೆಯಿತು: "ನನ್ನಿಂದ ಆಗಾಗೆ ವಾದದಲ್ಲಿ ಜಿತರಾಗಿದ್ದ ಕಾಶೀವಿದ್ವಾಂಸರೂ ಮೈಥಿಲಪಂಡಿತರೂ ಇನ್ನೂ ಅನೇಕ

ಜನ ತಾರ್ಕಿಕರೂ ನನ್ನ ಮೇಲೆ ವಿಷಕಕ್ಕುತ್ತಿದ್ದರಲ್ಲವೆ ? ಅವರೇನಾದರೂ ನನಗೆ ಮಾಟಮಾಡಿರಬಹುದೆ ? ಅಹಹ! ದೈವಗತಿ ವಿಚಿತ್ರವಾದದ್ದು. ಇದು ಯಾವ ದೇಶವೋ, ಇಲ್ಲಿಗೆ ನಾನು ಹೇಗೆ ಬಂದೆನೋ, ಈಗ ನಾನು ಹೋಗುತ್ತಿರುವದು ಎಲ್ಲಿಗೋ, ಏನೊಂದೂ ತೋರುವದಿಲ್ಲವಲ್ಲ! "

ಹೀಗೆಂದುಕೊಳ್ಳುತ್ತಾ ಇರುವಹಾಗೆಯೇ ಕಿಟಕಿಯಿಂದ ಹೊರಗೆ ನೋಡು ವಲ್ಲಿ ಒಂದು ರಮ್ಯವಾದ ತೆಂಗಿನ ತೋಟವು ಕಣ್ಣಿಗೆ ಬಿತ್ತು. ಅಲ್ಲಲ್ಲಿಯೇ ಕಪಿ ಗಳು ಎಳನೀರನ್ನು ಕುಡಿದು ಬುರುಡೆಗಳನ್ನು ಕೆಳಗೆ ಬಿಸಾಡುತ್ತಿದ್ದವು. ಒಂದು ಕಪಿಯು ನನ್ನನ್ನೇ ದುರುದುರನೆ ನೋಡುತ್ತಾ ಎಳನೀರುಬುರುಡೆಯನ್ನು ನನ್ನ ಕಡೆಗೆ ಎಸೆದು ಹಲ್ಲನ್ನು ಕಿಸಿದು ಕಿಚುಗುಟ್ಟುವದಕ್ಕೆ ಪ್ರಾರಂಭಿಸಿತು. ಆದರೆ ಏನು ವಿಚಿತ್ರ! ಅದರ ಬಾಯಲ್ಲಿಯೂ ತರ್ಕಪಙ್ಕ್ತಿ!

**"ಯತ್ಸಮಾನಾಧಿಕರಣಸಾಧ್ಯತಾವಚ್ಛೇದಕಾವಚ್ಛಿನ್ನವ್ಯಾಪ ಕತಾವಚ್ಛೇದಕರೂಪಾವಚ್ಛಿನ್ನಪ್ರತಿಯೋಗಿತಾಕಾ ಯಾವ ನ್ತೋ ಅಭಾವಾಃ ಸ್ವವಿಶಿಷ್ಟಹೇತ್ವಧಿಕರಣಾವಚ್ಛೇದೇನ ಪ್ರತಿ ಯೋಗಿತಾವಚ್ಛೇದಕಾವಚ್ಛಿನ್ನಸಮಾನಾಧಿಕರಣಾಃ ತತ್ತ್ವಂ ವ್ಯಾಪ್ತಿಃ ॥"**

ನನಗೆ ಒಂದು ಕಡೆ ನಗು, ಇನ್ನೊಂದು ಕಡೆ ಸಿಟ್ಟು. 'ನನ್ನ ಬಾಳು ಕಪಿ ಗಳೂ ಅಣಕಿಸುವ ಹಾಗಾಯಿತೆ !' ಎಂದುಕೊಳ್ಳುತ್ತಿರುವಷ್ಟರಲ್ಲಿ ರೈಲು ಮುಂದಕ್ಕೆ ಹೊರಟೇ ಹೋಯಿತು. ಕಪಿಯು ಎಸೆದ ಬುರುಡೆ ಎಲ್ಲಿಯೋ ಆ ಕಡೆ ಬಿತ್ತು. ಆದರೆ ಆಗಿನ ಕಾಲಕ್ಕೆ ಆ ಬುರುಡೆಯ ಹಾಗೆಯೇ ನನ್ನ ತಲೆಯೂ ಬರಿಯದಾಗಿತ್ತು. ಮಾಡುವದಕ್ಕೇನೂ ತೋಚಲಿಲ್ಲ; ಸ್ವಲ್ಪ ಸದ್ದಾದರೆ ತರ್ಕದ ಶಬ್ದಗಳು ಕೇಳಿಬರುತ್ತಿದ್ದವು !

ಇಷ್ಟರಲ್ಲಿ ಹೊರಗೆ ಯಾರೋ ಕೂಗಿದಂತೆ ಆಯಿತು. ಹೊರಗೆ ನೋಡಿ ದರೆ ಎಷ್ಟೋ ಜನಗಳ ಗದ್ದಲ. "ಗಾಡಿ ಹೋನಾ ಸಾಮಿ, ಗಾಡಿ !", "ಕೂಲಿ ಸಾಮಿ, ಕೂಲಿ !" ಎಂದು ಎಷ್ಟೋ ಜನ ರೈಲಿನ ಜೊತೆಗೇ ಓಡುತ್ತಿದ್ದರು. ಕೆಲವು ಜನರು ರೈಲುಗಾಡಿ ಮುಂದಕ್ಕೆ ಹೋಗುತ್ತಿದ್ದ ಹಾಗೆಯೇ ತಮ್ಮವರನ್ನು ಯಾರನ್ನೋ ಗುರ್ತಿಸುವದಕ್ಕೆ ಆ ಕಡೆಗೇ ನಿಟ್ಟಿಸಿ ನೋಡುತ್ತಿದ್ದರು. ಇನ್ನೂ

ಕೆಲವರು ಏನೂ ಕೆಲಸವಿಲ್ಲದೆ ಇದ್ದರೂ ಅತ್ತಲಾಗಿ ಇತ್ತಲಾಗಿ ಓಡಾಡುತ್ತಿದ್ದರು. ಒಂತೂ ಸಂತೆಯ ಹಾಗೆ ನೂರಾರು ಜನ ನೆರೆದಿತ್ತು. ಇದು ಯಾವ ಸ್ಟೇಷನ್ ಇರಬಹುದೋ ಎಂದು ನಾನು ಯೋಚಿಸುತ್ತಿರುವದರೊಳಗೆ ನರು ಎಷ್ಟೋ ಮಂದಿ ಕೆಳಕ್ಕಿಳಿದರು. ಸ್ವಲ್ಪ ಹೊತ್ತಿನಲ್ಲಿಯೇ ಬಹು ಜನ ಹೊರಟು ಹೋದರು. ಗದ್ದಲವೂ ಕಡಿಮೆಯಾಗುತ್ತ ಬಂತು. ಕೊನೆಗೆ ನನ್ನ ಗಾಡಿಯ ಬಾಗಿಲೂ ತೆರೆಯಿತು. ಒಬ್ಬ ಮುಸಲ್ಮಾನರವನು ಮುಂದಕ್ಕೆ ಬಂದು ಹಗ್ಗ ಹಿಡಿದು ನನ್ನನ್ನು ಕೆಳಕ್ಕೆ ಜಗ್ಗಿದನು. ನನ್ನನ್ನೇನಾದರೂ ಗಲ್ಲಿಗೆ ಹಾಕುವರೋ ಎಂದು ಭಾವಿಸಿಕೊಂಡೆನು. ಸ್ಟೇಷನ್ನಿನ ಗದ್ದಲದಲ್ಲಿ ನನಗೆ ನೂರಾರು ತರ್ಕದ ಪಶ್ನೆಗಳು ಒಂದೇ ಸಮನೆ ಕಿವಿಗೆ ಬಿದ್ದಿದ್ದವಾದ್ದರಿಂದಲೋ ದಾರಿಯಲ್ಲೆಲ್ಲ ತರ್ಕವನ್ನೇ ಯೋಚಿಸಿಕೊಳ್ಳುತ್ತ ಹೊಟ್ಟೆಯ ವಿಚಾರವನ್ನು ನಾನು ಬಿಟ್ಟಿದ್ದರಿಂದಲೋ ನನಗೆ ಸ್ವಲ್ಪ ಚಿತ್ತಭ್ರಮಣೆಯಾದಹಾಗೆ ಆಯಿತು. ನನ್ನನ್ನು ಇವನು ಹೀಗೆ ಏಕೆ ಎಲ್ಲಿಗೆ ಒಯ್ಯುತ್ತಿದ್ದಾನೋ ತಿಳಿಯಬೇಕೆಂದು ಕುತೂಹಲವಾಯಿತು. ನಾನು ಅವನನ್ನು ಏನೋ ಕೇಳಬೇಕೆಂದು ಬಾಯಿತೆಗೆದೆನೋ ಇಲ್ಲವೋ ನನ್ನ ಬಾಯಲ್ಲಿ ಮಾತುಗಳು ಬರುವದಕ್ಕೆ ಬದಲಾಗಿ ಕುದುರೆಯ ಹುಂಕಾರವೇ ಬಂತು! ಇಷ್ಟು ಹೊತ್ತಿಗೆ ಸರಿಯಾಗಿ ಅವನು ನನ್ನ ಬಾಯಿಗೆ ಕಡಿವಾಣವನ್ನು ಇಟ್ಟು 'ಅಚ್ಛಾ, ಅಚ್ಛಾ' ಎಂದು ಬೆನ್ನು ತಟ್ಟಿದನು. ಇನ್ನು ಸಹಿಸುವದಕ್ಕಾಗಲಿಲ್ಲ. ಮಹಾಮಹಾಸಭೆಗಳಲ್ಲಿ ನನ್ನ ಹತ್ತಿರಕ್ಕೆ ಬರುವದಕ್ಕೇ ಎಷ್ಟೋ ಜನ ಶುದ್ಧವೈದಿಕಬ್ರಾಹ್ಮಣರುಕೂಡ ಹೆದರಿಕೊಂಡು ನನ್ನ ಪೂಜ್ಯಾಸನಕ್ಕೆ ದೂರವಾಗಿ ಕೈಕಟ್ಟಿಕೊಂಡು ನಿಂತುಕೊಳ್ಳುತ್ತಿದ್ದರಲ್ಲವೆ? ಅಂಥ ನನ್ನ ಬೆನ್ನಮೇಲೆ ಈ ಕೊಳಕು ಮ್ಲೇಚ್ಛನ ಕೈಯೆ? ಎಂದು ದೊಪ್ಪನೆ ಬಿದ್ದು ಮೂರ್ಛೆಹೋದೆನು.

ಆದರೆ ನನ್ನ ವಿಧಿ ಇನ್ನೂ ಆಗತಾನೆ ಬೆನ್ನು ಹತ್ತಿತ್ತು. ಆ ಮುಸಲ್ಮಾನನು, 'ಈ ಹಾಳುಕುದುರೆ ಚಂಡೀಮಲಗುವ ಸ್ವಭಾವದ್ದು' ಎಂದು ತಿಳಿದುಕೊಂಡನೊ ಏನೋ, ಕೈಯಲ್ಲಿದ್ದ ಚಮುಕಿಯಿಂದ ಎರಡೇಟು ಬಿಗಿದನು.

ವಾಚಕರು ಮುಂದಿನ ಕಥೆಯೇನೆಂಬುದನ್ನು ತಿಳಿಯುವದರಲ್ಲಿ ಕುತೂಹಲವುಳ್ಳವರಾಗಿರಬೇಕು. ಆದ್ದರಿಂದ ನಡುನಡುವೆ ನನ್ನ ಮಾತನ್ನು ಸೇರಿ

ಸವೆ ಸಂನ್ಯಾಸಿಗಳು ಹೇಳಿದಂತೆಯೇ ಕಥೆಯನ್ನು ತಿಳಿಸಿಬಿಡುತ್ತೇನೆ. ಅವರು ಸ್ವಲ್ಪ ಹೊತ್ತು ನನ್ನ ಕಡೆಗೇ ನೋಡಿ ಮತ್ತೆ ಹೇಳತೊಡಗಿದರೇನೆಂದರೆ : "ಅಯ್ಯಾ, ನಾನು ಹೇಳುವದು ನಿನಗೆ ಕಲ್ಪನೆಯಾಗಿ ತೋರುತ್ತದೆಯೋ, ನಿಜವೆಂದು ತೋರುತ್ತದೆಯೋ! ಹೇಗಾದರೂ ಇರಲಿ, ಮುಂದೆ ಕೇಳು. ನಾನು ಸೇರಿದ ಮನೆಯು ಬೆಂಗಳೂರ ಗಾಣಿಗರ ಪೇಟೆಯ ಒಂದು ಮೂಲೆಯಲ್ಲಿತ್ತು. ಬೆಂಗಳೂರಿನಲ್ಲಿ ಎಷ್ಟೋ ದೊಡ್ಡ ದೊಡ್ಡ ಮನೆಗಳು ಇವೆ, ಆದರೆ ಇದು ಒಂದು ಸಣ್ಣ ಗುಡಿಸಲು. ಮನೆಯ ಹಿಂದುಗಡೆ ಒಂದು ಸಣ್ಣ ಬಯಲು. ಅಲ್ಲಿ ಇನ್ನೂ ಒಂದೆರಡು ಕುದುರೆಗಳನ್ನು ಕಟ್ಟಿತ್ತು. ಅವುಗಳ ಮುಂದೆ ಒಂದೊಂದು ಹಿಡಿ ಹುಲ್ಲೂ ದೂರಕ್ಕೆ ಸ್ವಲ್ಪ ನೀರೂ– ಕಾಣುತ್ತಿದ್ದವು.

"ತೃಣಾನಿ ಭೂಮಿರುದಕಂ ವಾಕ್ಚತುರ್ಥೀ ಚ ಸೂನೃತಾ ।
ಏತಾನ್ಯಪಿ ಸತಾಂ ಗೇಹೇ ನೋಚ್ಛಿದ್ಯನ್ತೇ ಕದಾಚನ ॥"

(ಹುಲ್ಲು, ನೆಲ, ನೀರು, ಒಳ್ಳೆಯಮಾತು– ಇಷ್ಟಾದರೂ ಸತ್ಪುರುಷರ ಮನೆಯಲ್ಲಿ ಯಾವಾಗಲೂ ಇದ್ದೇ ಇರುವವು) ಎಂಬ ಭಾರತದ ವಚನವು ನೆನಪಿಗೆ ಬಂತು. ಈ ಮನೆಯಲ್ಲಿ ಸ್ವಲ್ಪ ಹುಲ್ಲು, ಕೆಳಗೆ ನೆಲ, ದೂರದಲ್ಲಿ ನೀರು, ಆಗಾಗ್ಗೆ 'ಅಚ್ಛ ! ಅಚ್ಛ !' ಎಂಬ ಒಳ್ಳೆಯಮಾತು–ಇವಿಷ್ಟೂ ಇದ್ದೇ ಇದ್ದವು ! ನಾನು ಊರಿನಲ್ಲಿ ಮಂಚದ ಮೇಲೆ ಮೆತ್ತೆಯ ಮೇಲೆ ಮಲಗಿಕೊಳ್ಳುತ್ತಿದ್ದದ್ದನ್ನೂ ಮಲಗುವ ಮುಂಚೆ ಕೇಸರಿ, ಬಾದಾಮಿ, ಕಲ್ಲುಸಕ್ಕರೆ– ಇವುಗಳನ್ನು ಹಾಕಿದ ಹಸುವಿನ ಹಾಲನ್ನು ಕುಡಿಯುತ್ತಿದ್ದದ್ದನ್ನೂ, ನನಗೆ ಏನು ಕೊರತೆಯಾದೀತೋ ಎಂದು ನಮ್ಮ ತಾಯಿ ಆಗಾಗ ಬಂದು ವಿಚಾರಿಸಿಕೊಳ್ಳುತ್ತಿದ್ದದ್ದನ್ನೂ ನೆನಸಿಕೊಂಡೆ. ಈ ದಿನದ ಅತಿಥಿಸತ್ಕಾರದ ಸಾಮಾನುಗಳಿಗೂ ಮನೆಯಲ್ಲಾಗುತ್ತಿದ್ದ ಭೋಗಕ್ಕೂ ಹೋಲಿಸಿದರೆ ಎಲ್ಲಿಂದೆಲ್ಲಿಗೆ ?– ಎಂದು ಮನಸ್ಸಿನಲ್ಲಿಯೇ ಕೊರಗುತ್ತಾ ನನ್ನನ್ನು ಕಟ್ಟಿಹಾಕಿದ್ದ ಕಾಲುಹಗ್ಗವನ್ನು ಒಂದು ಸಲ ಎಳೆದೆನು. ಸರಿಗುಣಿಕೆಯೋ ಏನೊ, ಇನ್ನಷ್ಟು ಬಿಗಿದುಕೊಂಡಿತು. ನಾನು ಲಕ್ಷಣಶಾಸ್ತ್ರಿಯೆಂಬ ನೆನಪೊಂದು ಉಳಿದಿದೆಯೇ ಹೊರತು ಮಿಕ್ಕ ವಿಷಯದಲ್ಲಿ ಪಕ್ಕದಲ್ಲಿರುವ ಕುದುರೆಗಳಂತೆಯೇ ನಾನೂ ಒಂದು ಕುದುರೆಯೇ ಎಂಬುದು ಕೂಡಲೆ ಮನಸ್ಸಿಗೆ ತಟ್ಟಿತು.

ಸ್ಟೇಷನ್ನಿನಿಂದ ಒಂದೇಸಮನೆ ಓಡಿಬಂದಿದ್ದದ್ದರಿಂದ ತುಂಬ ಆಯಾಸ ವಾಗಿತ್ತು. ಆದ್ದರಿಂದ ಸುಮ್ಮನೆ ಮಲಗಿಕೊಳ್ಳುವದು ಉತ್ತಮವೆಂದು ತೋರಿ ಹಾಗೆಯೇ ಮಾಡಿದೆನು. ಆದರೆ ಹಸಿವಿನ ಬಾಧೆಯನ್ನು ತಡೆಯುವ ವಕ್ಕಿಲ್ಲ. ಸಂಜೆಯಾಗುತ್ತಲೂ ಸಂಧ್ಯಾವಂದನೆಯನ್ನು ಮಾಡಿದಲ್ಲದೆ ನಾನು ಏನೂ ತಿನ್ನುವ ವಾಡಿಕೆ ಇರಲಿಲ್ಲ. ಈಗ ಕುದುರೆಯಾದ್ದರಿಂದ ಸಂಧ್ಯಾವಂದನೆ ಎಲ್ಲಿ ಬಂತು ? ರೈಲುಮೈಲಿಗೆಯನ್ನೂ ಮುಸಲ್ಮಾನನ ಸ್ಪರ್ಶವನ್ನೂ ನಾನಿದ್ದ ಲಾಯದ ದುರ್ಗಂಧವನ್ನೂ ನೆನೆನೆನೆದು “ಭಗವತಿ, ಲೋಕಮಾತೆ, ಇಂದು ಇಂಥ ಅಶುಚಿಯಾದ ಸನ್ನಿವೇಶದಲ್ಲಿ ಇಂಥ ಕದನ್ನವನ್ನು ತಿನ್ನುವ ಗತಿಯನ್ನು ಕೊಟ್ಟೆಯ !” ಎಂದು ದುಃಖಿಸುತ್ತಾ ಎದುರಿಗೆ ಇರುವ ಹುಲ್ಲನ್ನೇ ಒಂದಿಷ್ಟು ಬಾಯಿಗೆ ಹಾಕಿಕೊಳ್ಳುವದಕ್ಕೆ ಮುಸುಡಿಯನ್ನು ನೀಡಿದೆನು. ಒಂದು ಹಿಡಿ ಹುಲ್ಲು ಬಾಯಿಗೆ ಬಂತು. ಅದನ್ನು ಅಗಿದು ಅಗಿದು ಮೆದ್ದ ಹಾಗೆಲ್ಲ, ಆಹಾ ! ಏನುಹೇಳಲಿ ! ದೇವಲೋಕದ ಅಮೃತವನ್ನು ಕುಡಿದಂತೆ ಸೀಯಾದ ರಸವು ನಾಲಗೆಗೆ ತೋರಹತ್ತಿತು. ಇದರ ನಡುವೆ ಹುಲ್ಲನ್ನು ನಾನು ಅಗಿಯುವಾಗ ಆಗುತ್ತಿದ್ದ ಕಟಕಟಶಬ್ದವೂ ನನ್ನ ಪಾಲಿಗೆ ತರ್ಕದ ಪಙ್ಕ್ತಿಯೇ ಆಗಿ ತೋರುತ್ತಿತ್ತು ! ಆಗ ಕೇಳಿಬಂದ ಒಂದು ವಾಕ್ಯವು ಯಾವ ಗ್ರಂಥದ್ದು ಇರಬಹುದೆಂದು ಹಾಗೆಯೇ ಯೋಚಿಸಿಕೊಳ್ಳುತ್ತಾ ಹುಲ್ಲನ್ನು ತಿನ್ನದೆ ಇರುತ್ತಿದ್ದೆನು :-

**“ನ ಲೋಮತ್ವಾದ್ಯವಚ್ಛಿನ್ನಸಂಬನ್ಧಾನ್ತರವತ್ತಯಾ ಗೃಹೀತಾತ್ ಪಶ್ವಾದಿಪದಾಲ್ಲೋಮತ್ವಾದಿನಾ ಲೋಮಾದಿಮುಖ್ಯವಿಶೇಷ್ಯಕಸ್ಯೈವ ಸ್ಮರಣಸ್ಯ ಧರ್ಮಿಸ್ಮರಣೋದ್ಬೋಧಕಾನ್ತರವಿರಹದಶಾಯಾಮುತ್ಪಾದದರ್ಶನಾತ್, ತತ್ತದ್ರೂಪಾವಚ್ಛಿನ್ನಶಕ್ತತ್ವೇನ ಗೃಹೀತಾತ್ ಪದಾದಪಿ ತತ್ತದ್ರೂಪಾವಚ್ಛಿನ್ನಮುಖ್ಯವಿಶೇಷ್ಯಕಸ್ಮರಣೋತ್ಪಾದಸ್ಯಾನುಭವಿಕತ್ವಾತ್ ತತೆಸ್ತದ್ಧರ್ಮಾವಚ್ಛಿನ್ನಪ್ರಕಾರಕಧರ್ಮಿಸ್ಮರಣಸ್ಯ ನಿಯಮತಃ ಸ್ವೀಕಾರಾಸಂಭವಾಲ್ಲೋಮಾದಿಮಾತ್ರಶಕ್ತತ್ವೇನ ಗೃಹೀತೆ ಪದಾನ್ನಿಯಮತಸ್ತತ್ಪ್ರಕಾರಕಶಾಬ್ದಬೋಧಸ್ಯಾ ನಿರ್ವಾಹಾತ್”**

ಈ ವಾಕ್ಯವು ಎಲ್ಲಿಯದೆಂಬುದು ಕೊನೆಗೂ ಹೊಳೆಯಲೇ ಇಲ್ಲ. ಆದರೆ ನಾನು ಪಶುಜಾತಿಗೆ ನಿಜವಾಗಿಯೂ ಸೇರಿದ್ದೇನೆಂಬುದಕ್ಕೆ ಇನ್ನೊಂದು ಸಾಕ್ಷ್ಯವು ಇಷ್ಟರಲ್ಲಿಯೇ ಒದಗಿತು. ಅದೇನೆಂದರೆ ನನ್ನ ಪಕ್ಕದಲ್ಲಿದ್ದ ಮತ್ತೊಂದು ಕುದುರೆಯು ನಾನು ಹುಲ್ಲನ್ನು ತಿನ್ನದೆ ಬಾಯಲ್ಲಿಯೇ ಇಟ್ಟು ಕೊಂಡು ಕುಳಿತಿದ್ದದ್ದನ್ನು ನೋಡಿ ಆಶ್ಚರ್ಯದಿಂದಲೋ, ಅಥವಾ ತನಗೆ ಹಾಕಿದ್ದ ಹುಲ್ಲಿನಿಂದ ಹಸಿವು ಅಡಗದೆ ಇದ್ದದ್ದರಿಂದಲೋ, ಅಥವಾ ಬೇರೊಂದು ಭಾವನೆಯಿಂದಲೋ "ಹುಹುಹು" ಎಂದು ಕೆನೆಯುತ್ತಾ ನನ್ನ ಕಡೆಗೆ ಬರು ವದಕ್ಕೆ ಪ್ರಯತ್ನಿಸಿತು. ಮನೆಯ ಒಳಗೆ ಮಲಗಿದ್ದ ಯಜಮಾನನು ಕೂಡಲೆ ಹೊರಕ್ಕೆ ಬಂದನು. ನನ್ನ ಕಡೆಗೆ ಬರುತ್ತಿದ್ದ ಕುದುರೆಗೆ ಒಂದು ಪೆಟ್ಟುಹಾಕಿ, ಅದರ ಹಗ್ಗವನ್ನು ಬಿಗಿಯಾಗಿ ಕಟ್ಟಿಹಾಕಿದ್ದಲ್ಲದೆ ನಾನು ಹುಲ್ಲನ್ನು ಒಂದಿಷ್ಟೂ ತಿನ್ನದೆ ಇದ್ದದ್ದನ್ನು ಕಂಡು ಅವನು ಹಿಂದೂಸ್ಥಾನಿಯಲ್ಲಿ ಏನೋ ಗೊಣಗಿ ಕೊಂಡನು. ಅವನ ಹೆಂಡತಿಯೂ ಹೊರಕ್ಕೆ ಬಂದಳು. ಅವರಿಬ್ಬರೂ ನನ್ನನ್ನು ನೋಡಿ "ಈ ಕುದುರೆ ಹೊಸ ನೆಲಕ್ಕೆ ಹೆದರಿರುವ ಹಾಗೆ ತೋರುತ್ತದೆ" ಎಂಬ ಅಭಿಪ್ರಾಯವುಳ್ಳ ಮಾತನ್ನಾಡಿಕೊಂಡು ಇನ್ನಷ್ಟು ಹುಲ್ಲನ್ನು ಹಾಕಿ ಹತ್ತಿರವೇ ಸುರಿಯಿಟ್ಟು ಮನೆಯೊಳಕ್ಕೆ ಹೋದರು.

ರಾತ್ರಿಯಲ್ಲಿ ನನಗೆ ಹಸಿವಿನಿಂದ ನಿದ್ರೆಯೇ ಬರಲಿಲ್ಲ. ಆ ದಿನ ನನಗೆ ಒದಗಿದ ವಿಚಿತ್ರವಾದ ಘಟನಾವಳಿಯನ್ನು ನೆನೆದುಕೊಂಡು– ಆಶ್ಚರ್ಯಪಡು ತ್ತಲೂ ದುಃಖಪಡುತ್ತಲೂ ಕಾಲವನ್ನು ಕಳೆದೆನು. ಬೆಳಗಿನ ಜಾವಕ್ಕೆ ತುಸು ಜೊಂಪು ಹತ್ತಿತು. ಇಷ್ಟರಲ್ಲಿ ಬೆಂಗಳೂರಿನ ಜಟ್ಕಾಗಾಡಿಗಳು ಓಡಾಡುವದಕ್ಕೆ ಮೊದಲಾದವು. ಆಗ ಅವು ಅತ್ತಿತ್ತ ಓಡಾಡುವಾಗ ಆಗುವ ಶಬ್ದವು ನಾನು ನಿತ್ಯವೂ ಗಟ್ಟಿಮಾಡುತ್ತಿದ್ದ ಕ್ರೋಡಪತ್ರಗಳನ್ನು ನೆನಪಿಗೆ ತಂದಿತು. ಎಷ್ಟೋ ವಾಕ್ಯಗಳು ನಾನು ಬೇಡಬೇಡವೆಂದರೂ ಕಿವಿಯ ಹತ್ತಿರವೇ ಯಾರೋ ಹೇಳಿದಂತೆ ಕೇಳಬರುತ್ತಿದ್ದವು!

ಈ ದಿನದಿಂದ ನನ್ನ ಹೆಸರು ಹಸೇನ್. ಲಕ್ಷ್ಮಣಶಾಸ್ತ್ರಿಯೆಂಬ ಹೆಸರಿನ ನೆನಪು ನನ್ನೊಬ್ಬನಲ್ಲಿ ಉಳಿಯಿತು. ಗಾಣಿಗರಪೇಟೆಯಲ್ಲಿ ಒಬ್ಬ ಮುಸಲ್ಮಾನ

ನಸ ಮನೆಯ ಹಿತ್ತಲಲ್ಲಿರುವ ಕುದುರೆಗೆ ಶಾಸ್ತ್ರಿಯೆಂಬ ಹೆಸರೆಂಬುದು, ಪಾಪ, ಂಗಳೂರಿನವರಿಗೇನು ಗೊತ್ತು ? ಆ ದಿನ ಬೆಳಗಾಗುತ್ತಲೂ ಒಂದು ಹೊಸ ಟ್ಕಾಗಾಡಿಯನ್ನು ತಂದು ಅದಕ್ಕೆ ನನ್ನನ್ನು ಕಟ್ಟಿದರು. ಇನ್ನು ಮೇಲೆ ನನ ನ್ನಿಗೆ ಮ್ಲೇಚ್ಛನ ಸಾಕ್ಷಾತ್ಸಂಸರ್ಗವಿಲ್ಲವಾದರೂ ಇನ್ನು ಈ ಜಟ್ಕಾಗಾಡಿಯಲ್ಲಿ ಯಾರುಯಾರು ಕೂಡುವರೋ ಅವರ ಸಂಬಂಧದಿಂದ ನನಗೆ ಯಾವಯಾವ ಸ ಅನುಭವಗಳು ಬರಬೇಕಾಗಿವೆಯೊ !– ಎಂದು ನನ್ನೊಳಗೆ ನಾನು ಯೋಚಿಸಿಕೊಳ್ಳುತ್ತಿರುವಲ್ಲಿ ಮನೆಯ ಯಜಮಾನನು ಒಳಗಿಂದ ಬಂದು ಗಾಡಿ ಯ ಮೇಲೆ ಚಟ್ಟನೆ ಹಾರಿ ಕುಳಿತು "ಹಸೇನ್, ಅಬ್ ತಂಟಾ ಮತ್ ಕರೋ ! ಲ್ದಿ ಜಲ್ದಿ ಜಾನಾ"– ಎಂದು ಗಾಡಿಯೊಳಗೆ ತಾನು ಸಿಕ್ಕಿಸಿಟ್ಟಿದ್ದ ಒಂದು ಣ್ಣ ಬಿದಿರುಕೋಲನ್ನು ಚಟೀರನೆ ಚೆನ್ನಾಗಿ ನನಗೆ ತಾಗಿಸಿದನು.

ಇದು ಸಂತೋಷಕ್ಕಾಗಿ ಅವನು ಹಾಕಿದ ಮೊದಲನೆಯ ಏಟು ! ಇನ್ನು ುಂದೆ ಎಷ್ಟೋ ಕಶಾಪ್ರಹಾರಗಳು ಬೆನ್ನ ಮೇಲೆ ಬೀಳಲಿವೆಯೆಂಬುದು ನನ್ನ ನಸ್ಸಿಗೆ ಬಂದೊಡನೆ ಏಟಿನ ಪ್ರಾಗಭಾವ, ಪ್ರಧ್ವಂಸಾಭಾವ– ಮುಂತಾದ ಭಾವಗಳ ವಿಚಾರವು ತರ್ಕಸಂಸ್ಕೃತವಾದ ನನ್ನ ತಲೆಯಲ್ಲಿ ತುಂಬಿಕೊಂಡಿತು. ಷ್ಟರಲ್ಲಿ ನಾನು ತಿಳಿಯದೆಯೋ ತಿಳಿದೋ ಒಂದೊಂದು ಹೆಜ್ಜೆ ಮುಂದಕ್ಕೆ ಡುತ್ತಲೂ ಜಟ್ಕಾವು ಎಡಕ್ಕೆ ಬಲಕ್ಕೆ ತಿರುಗಿವಂತೆಲ್ಲ ಚಕ್ರದ ಶಬ್ದವು ನನ್ನ ವಿಗೆ ವ್ಯಾಪಿಸುವದಕ್ಕೆ ಆರಂಭಿಸಿತು. ಆಗ ತರ್ಕದ ಪಙ್ಕ್ತಿಗಳು ಕಿವಿಯಲ್ಲಿ ತ್ತಿ ಕಿರುಗುಟ್ಟುವದಕ್ಕೆ ಮೊದಲಾದವು. ನಮ್ಮ ಸೀಮೆಯ ಎಕ್ಕಾಗಳು ಸೂರುಸೀಮೆಯ ಜಟ್ಕಾಗಳಂತಿಲ್ಲ ; ಆದರೂ ಇವೆರಡೂ ಒಂದೇ ಬಗೆ ; ಒಳಗೆ ತವರಿಗೆ ಸ್ಥಿರಸುಖವಾದ ಆಸನವಿಲ್ಲ, ಹೊರಗೆ ಕುದುರೆಗೆ ಮುಂಬಾರಹಿಂಬಾರ ಕಾಟ ತಪ್ಪಿದ್ದಲ್ಲ. ಆದರೆ ನಾನು ಕುದುರೆಯಾಗಿ ಹಿಂಬಾರಮುಂಬಾರಗಳ ಕುಳವನ್ನು ಅನುಭವಿಸುವಾಗಲೂ ತರ್ಕದ ಶಬ್ದಗಳು ಕಿವಿಯ ಮೇಲೆ ದರ ಮೇಲೆ ಒಂದು ಬೀಳುತ್ತಲೇ ಇದ್ದದ್ದರಿಂದ ಇನ್ನೂ ಎಂಥೆಂಥ ವಾಕ್ಯಗಳು ನಪಾಗುತ್ತವೆಯೋ ನೋಡೋಣವೆಂದು ಹರ್ಷದಿಂದ ನಾಗಾಲೋಟಕ್ಕೆ ಪ್ರಾರಂಭಿಸಿಬಿಟ್ಟೆನು. ಬಾಲವನ್ನು ಸ್ವಲ್ಪ ಎತ್ತಿಕೊಂಡು ಓಡುತ್ತಿರುವ ನನ್ನನ್ನು ನೋಡಿ "ಅರೇ ಇಸ್ಕಿ !" ಎಂದು ಗಾಡಿಯವನು ಕೂಗಿಕೊಳ್ಳುವದು ಕೂಡ ನಗೆ ಲಕ್ಷ್ಯವಿಲ್ಲದೆಹೋಯಿತು. ಅವನ ಮನಸ್ಸಿನಲ್ಲಿ ಯಾವ ಭಾವನೆಗಳು

ಮೂಡಿಕೊಂಡಿದ್ದವೋ ನಾನರಿಯೆ. ನನಗೆ ಮಾತ್ರ ಶಬ್ದವು ಅನಿತ್ಯವೆಂಬುದ
ನ್ನು ಸಾಧಿಸುವ ಈ ತರ್ಕದ ಪಙ್ಕ್ತಿಯು ಎರಡು ಕಿವಿಯಲ್ಲಿಯೂ ಯಾರೋ
ಗಟ್ಟಿಯಾಗಿ ಹೇಳುವಂತೆ ಕೇಳಬರುತ್ತಿತ್ತು :—

"ಅಯಂ ಶಬ್ದಃ ಅನಿತ್ಯತ್ವವನ್ನಿಷ್ಠಾತ್ಯಂತಾಭಾವಪ್ರತಿಯೋಗಿ
ಪಕ್ಷವೃತ್ತಿತ್ವರಹಿತಾನಿತ್ಯತ್ವವನ್ನಿಷ್ಠಾನಿತ್ಯತ್ವಾತ್ಯಂತಾಭಾವ
ವನ್ನಿಷ್ಠತ್ವರಹಿತಾಧಿಕರಣವಾನ್, ಮೇಯತ್ವಾದಿತಿ॥ ಅನಿತ್ಯತ್ವ
ವನ್ನಿಷ್ಠಾತ್ಯಂತಾಭಾವಪ್ರತಿಯೋಗಿತ್ವೇ ಸತಿ ಯೇ ಪಕ್ಷವೃತ್ತ
ಯೋ ಧರ್ಮಾಃ, ತೇಷ್ವನಿತ್ಯತ್ವವನ್ನಿಷ್ಠಾತ್ಯಂತಾಭಾವಪ್ರತಿ
ಯೋಗಿಪಕ್ಷವೃತ್ತಿತ್ವಂ ಧರ್ಮಃ। ಯೇ ಚಾನಿತ್ಯತ್ವವನ್ನಿಷ್ಠತ್ವೇ
ಸತಿ ಅನಿತ್ಯತ್ವಾತ್ಯಂತಾಭಾವವನ್ನಿಷ್ಠಾ ಧರ್ಮಾಃ। ತೇಷ್ವನಿತ್ಯತ್ವ
ವನ್ನಿಷ್ಠಾನಿತ್ಯತ್ವಾತ್ಯಂತಾಭಾವವನ್ನಿಷ್ಠತ್ವಂ ಧರ್ಮಃ। ಅನಿತ್ಯ
ತ್ವವನ್ನಿಷ್ಠಾತ್ಯಂತಾಭಾವಪ್ರತಿಯೋಗಿಪಕ್ಷವೃತ್ತಿತ್ವರಹಿತಶ್ಚಾಸೌ
ಅನಿತ್ಯತ್ವವನ್ನಿಷ್ಠಾನಿತ್ಯತ್ವಾತ್ಯಂತಾಭಾವವನ್ನಿಷ್ಠತ್ವರಹಿತಶ್ಚ
ತದಧಿಕರಣಂ ತದಾಶ್ರಯ ಇತ್ಯರ್ಥಃ॥"

ಈ ಸಮಯದಲ್ಲಿ ಈ ತರ್ಕದಂತೆ ಶಬ್ದದ ಅನಿತ್ಯತ್ವವನ್ನು ಒಪ್ಪಬೇಕೊ, ಒಂದೇಸಮನೆ ನನಗೆ ಕೇಳಿಬರುತ್ತಿದ್ದ ಶಬ್ದಗಳ ಅನುಭವವನ್ನು ಹಿಡಿದು ಮೀಮಾಂಸಕರಂತೆ ಶಬ್ದನಿತ್ಯತ್ವವನ್ನೇ ಒಪ್ಪಬೇಕೊ— ಎಂಬ ಸಂದೇಹವು ಕೂಡ ನನಗೆ ಬರುವದಕ್ಕೆ ಮೊದಲಾಯಿತು.

ಆದರೆ ಈ ಸಂದೇಹವನ್ನು ಪರಿಹರಿಸುವ ಮೀಮಾಂಸಕರಾಗಲಿ ತಾರ್ಕಿಕರಾಗಲಿ ದಾರಿಯಲ್ಲಿ ಬರುವದಕ್ಕೆ ಬದಲು ಒಂದು ಕುದುರೆಯ ಸಾರೋಟು ನನ್ನೆದುರಿಗೆ ಕಾಣಿಸಿಕೊಂಡಿತು. ನಾನು ನನ್ನ ತರ್ಕದ ವಿಚಾರದಲ್ಲಿ ಮುಳುಗಿದ್ದದ್ದರಿಂದಲೋ ಏನೊ, ಆ ಸಾರೋಟು ಹತ್ತಿರಕ್ಕೆ ಬರುವವರೆಗೆ ಅದು ನನ್ನ ಕಣ್ಣಿಗೆ ಗೋಚರವಾಗಲೇ ಇಲ್ಲ. ಸಾರೋಟಿನ ಕುದುರೆಯು ಗಾಬರಿಯಿಂದ ಹಾರಿ ಎರಡು ಕಾಲುಗಳನ್ನೂ ಮೇಲಕ್ಕೆತ್ತಿತು. ಗಾಡಿಯೊಳಗಿದ್ದ ಒಬ್ಬಳೇ ಒಬ್ಬಳು ಸ್ತ್ರೀಯು ತಲೆಕೆಳಗಾಗಿ ರಸ್ತೆಯಮೇಲೆ ಉರುಳಿದಳು. ನನಗೆ ಮಾತ್ರ ಆಗಲೂ ಏನೂ ತೋಚಲಿಲ್ಲ, ನನ್ನ ಕಿವಿಯಲ್ಲಿ ಆಗುತ್ತಿದ್ದ ತರ್ಕಪಙ್ಕ್ತಿಗಳ ಹಾವಳಿಯನ್ನಂತು ವರ್ಣಿಸಲಾರೆ !

ಯಜಮಾನನಿಗೆ ನನ್ನ ಮೇಲೆ ತುಂಬ ಸಿಟ್ಟು ಬಂದಿರಬೇಕೆಂದು ತೋರುತ್ತದೆ. ನಾನು ಅದುವರೆಗೂ ಓಡಿಬಂದದ್ದನ್ನೂ ನನ್ನಿಂದ ಮುಂದಿನ ಸಾರೋಟು ಉರುಳಿಬಿದ್ದು ಸಾರೋಟಿನಲ್ಲಿದ್ದ ಸ್ತ್ರೀರತ್ನವು ಗಾಯಪಟ್ಟು ತನಗೆ ಇಲ್ಲದ ಸೀಕಲಾಟವನ್ನು ತಂದಿಟ್ಟದ್ದನ್ನೂ ಕಂಡು ಅವನು ನನ್ನನ್ನು ಒಂದೇಸಮನೆ ಬಾರುಕೋಲಿನಿಂದ ಹೊಡೆಯುವದು, ಕೈಯಿಂದ ಗುದ್ದುವದು, ಬಾಲವನ್ನು ತಿರುಚುವದು, ಕಾಲಿನಿಂದ ಒದೆಯುವದು— ಇವೇ ಮುಂತಾದ ಸಂಭಾವನೆಗಳನ್ನು ಅನುಗ್ರಹಿಸಿದನು. ಆಗ ನಾವು ನಿಂತಿದ್ದ ಸ್ಥಳವು ಒಂದು ಚೌಕಿಯು. ಅಲ್ಲಿ ಎಡೆಬಿಡದೆ ಒಂದು ಕಡೆಯಿಂದ ಒಂದು ಕಡೆಗೆ ಓಡಾಡುವ ಲೆಕ್ಕವಿಲ್ಲದಷ್ಟು ಬಂಡಿಗಳು, ಜಟ್ಕಗಳು, ಸಾರೋಟುಗಳು, ಅವುಗಳನ್ನು "ಬಾಜು, ಬಾಜು!" ಎಂದು ತಡೆತಡೆದು ಬಿಡುತ್ತಿದ್ದ ಪೋಲಿಸಿನವರ ಗದ್ದಲ, ಬೈಸಿಕಲ್ಲುಗಳ ಘಂಟೆಯನ್ನು ಬಾರಿಸುತ್ತಾ ಒಬ್ಬರನ್ನೊಬ್ಬರು ತಪ್ಪಿಸಿಕೊಂಡು ಹೊರಡಬೇಕೆಂದಿದ್ದರೂ ಸವಾರರು ಒಬ್ಬರ ಮೇಲೊಬ್ಬರು ಬಿದ್ದು ಢಿಕ್ಕಾಮುಕ್ಕಿಯಾಗಿ ಕೂಗುವದು, ಅಳುವದು, ಕೇಕೆಹಾಕುವದು— ಮುಂತಾದ ಜನರ ಗಲಾಟೆಗೆ ಆಸ್ಪದವನ್ನು ಕೊಡುತ್ತಿದ್ದದ್ದು— ಇಷ್ಟೆಲ್ಲ ಸೇರಿ ನನಗೆ ನನ್ನ ಮೈನೋವು ಒಂದಿಷ್ಟೂ ತೋರದಂತೆ ಮಾಡುವ ತರ್ಕದ ಪಙ್ಕ್ತಿಗಳನ್ನು ಎಡೆಬಿಡದೆ ನೆನಪಿಗೆ ತಂದುಕೊಡುತ್ತಿದ್ದವು. ಇಗೋ, ಇದೊಂದು ವಾಕ್ಯ!—

"ಯದ್ರೂಪಾವಚ್ಛಿನ್ನವಿಷಯಿತಾವದ್ವೃತ್ತಿರ್ಯೈಃ ಕಿಂಚಿದ್ರೂಪಾವಚ್ಛಿನ್ನವಿಷಯಿತಾ ನಾಸ್ತೀತಿ ಪ್ರತೀತಿಸಿದ್ಧಃ ಕಿಂಚಿದ್ರೂಪನಿಷ್ಠಾವಚ್ಛೇದಕತಾಭಿನ್ನಾವಚ್ಛಿನ್ನತಾತ್ವನಿಷ್ಠಾವಚ್ಛೇದಕತಾಭಿನ್ನಾವಚ್ಛೇದಕತ್ವಾನಿರೂಪಕತಾದೃಶಾವಚ್ಛೇದಕತಾನಿರೂಪಕಾವಚ್ಛಿನ್ನತ್ವನಿಷ್ಠಾವಚ್ಛೇದಕತಾಭಿನ್ನ ವಿಷಯಿತಾತ್ವನಿಷ್ಠಾವಚ್ಛೇದಕತಾಭಿನ್ನಾವಚ್ಛೇದಕತ್ವಾನಿರೂಪಕಪ್ರತಿಯೋಗಿತಾಕಾಭಾವಪ್ರತಿಯೋಗಿವಿಷಯಿತಾ ನಾಸ್ತೀತಿ ಪ್ರಸಿದ್ಧಾಭಾವಮುಪಾದಾಯ ತನ್ನಿಷ್ಠಾವಚ್ಛೇದಕತಾಭಿನ್ನಾಯದ್ರೂಪಾವಚ್ಛಿನ್ನವಿಷಯಿತಾನಿಷ್ಠಾವಚ್ಛೇದಕತಾಭಿನ್ನಾನಿಶ್ಚಯತ್ವನಿಷ್ಠಾವಚ್ಛೇದಕತಾಭಿನ್ನಾವಚ್ಛೇದಕತಾನಿರೂಪಕನಿಶ್ಚಯನಿಷ್ಠಾವಚ್ಛೇದಕತಾನಿರೂಪಕವೃತ್ತಿತ್ವನಿಷ್ಠಾವ

ಚ್ಛೇದಕತಾನಿರೂಪಕಭೇದನಿಷ್ಠಾವಚ್ಛೇದಕತಾನಿರೂಪಿತಪ್ರತಿ
ಯೋಗಿತ್ವನಿಷ್ಠಾವಚ್ಛೇದಕತಾನಿರೂಪಕಾವಚ್ಛೇದಕತಾತ್ವಾ
ವಚ್ಛಿನ್ನಪ್ರತಿಯೋಗಿತಾಕಾಭಾವವಿಶಿಷ್ಟತ್ವಮ್ ||"

ಮತ್ತೊಂದು !

"ಪಕ್ಷತಾವಚ್ಛೇದಕವಿಶಿಷ್ಟಪಕ್ಷಗ್ರಹತ್ವವ್ಯಾಪಕಪ್ರಕಾರತಾ
ನಿಷ್ಠೋಭಯಾನ್ಯತ್ವಧರ್ಮನಿಷ್ಠನಿರವಚ್ಛಿನ್ನಾವಚ್ಛೇದಕತಾ
ನಿರೂಪಕಪ್ರಕಾರತಾನಿಷ್ಠಸ್ವವಿಶಿಷ್ಟವಿಶೇಷ್ಯತ್ವಸಂಬಂಧಾವಚ್ಛಿ
ನ್ನಾವಚ್ಛೇದಕತಾನಿರೂಪಕಗ್ರಹನಿಷ್ಠಾವಚ್ಛೇದಕತಾನಿರೂಪಕ
ವೃತ್ತಿತ್ವನಿಷ್ಠಾವಚ್ಛೇದಕತಾನಿರೂಪಕಭೇದನಿಷ್ಠಾವಚ್ಛೇದಕ
ತಾನಿರೂಪಕಪ್ರತಿಯೋಗಿತಾ ...... ......" ಇತ್ಯಾದಿ.

ಹೀಗೆ ಒಂದರ ಮೇಲೆ ಒಂದು ತರ್ಕದ ಪಙ್ಕ್ತಿಗಳು ಕಿವಿಯಲ್ಲಿ ಸುತ್ತಿ ಸುತ್ತಿಕೊಂಡು ಕೇಳಿಬರುತ್ತಲಿರುವದು, ಮುಸಲ್ಮಾನನು ಬೆಳಗಿನಿಂದ ತನಗೆ ಯಾರೂ ಬಾಡಿಗೆಗೂ ದೊರೆಯದೆ ನನ್ನ ಚಾಳಿಯಿಂದ ಉಂಟಾದ ಅನರ್ಥಕ್ಕೆ ತಾನು ಗುರಿಯಾಗಿರುವದನ್ನು ನೆನೆದುಕೊಂಡು ರೇಗಿರೇಗಿಬೀಳುತ್ತಾ ತನಗೆ ತೋರಿದ ರೀತಿಯಲ್ಲೆಲ್ಲ ನನ್ನನ್ನು ಬಾಸುಂಡೆ ಬರುವಂತೆ ಹೊಡೆಯುವದು- ಈ ಸಂಕಟದ ನಡುವೆ ನನಗೆ ಏನು ಮಾಡಬೇಕೆಂಬುದೇ ಹೊಳೆಯದಾಯಿತು.

ಈ ಸುಮಾರಿಗೆ ನಾವು ಸಂಸ್ಕೃತಪಾಠಶಾಲೆಯನ್ನು ಸೇರಿದೆವು. ಅಲ್ಲಿ ಇಬ್ಬರು ಪ್ರಾಯಸ್ಥರು "ಅಯ್ಯ ! ನಮ್ಮನ್ನು ಬಸವನಗುಡಿಗೆ ಕರೆದುಕೊಂಡು ಹೋಗುತ್ತೀಯ ?" ಎಂದು ಬಂದರು. ಯಜಮಾನನಿಗೆ ಇನ್ನು ಶನಿ ಬಿಡುಗಡೆಯಾಯಿತೆಂಬ ಸಂತೋಷವಾಗಿರಬಹುದು ; ಅವನು ಕೂಡಲೆ "ಬನ್ನಿ ಸಾಮಿ, ಬನ್ನಿ" ಎಂದು ಅವರನ್ನು ಗಾಡಿಯಲ್ಲಿ ಕೂರಿಸಿಕೊಂಡನು. ಆದರೆ ಗಾಡಿಯವನ ಗ್ರಹಚಾರ ಬಿಡುಗಡೆಯಾಗಿದ್ದರೂ ನನ್ನ ಗ್ರಹಚಾರವು ಅಷ್ಟಕ್ಕೆ ತೊಲಗಿರಲಿಲ್ಲ. ಏಕೆಂದರೆ ಆ ಯುವಕರಿಬ್ಬರೂ ವಿದ್ಯಾರ್ಥಿಗಳು. ಅವರು ಯಾವದೋ ಪರೀಕ್ಷೆಗೆ ಸಿದ್ಧರಾಗುತ್ತಿದ್ದರೊ ಏನೋ ; ಆದ್ದರಿಂದ ಅವರು ಜಟ್ಕದ ಮೇಲೆ ಕೂತದ್ದೇತಡ, ಕೂಡಲೆ

**"ಇದಂ ಹರಿಪದಮಿತ್ಯನುಗತಪ್ರತೀತ್ಯಾ ಹರ್ಯುಪಸ್ಥಿತಿತ್ವಾವಚ್ಛೇದೇನ ಹರಿಪದಜ್ಞಾನತ್ವೇನ ಹೇತುತ್ವಾತ್ ತದವಚ್ಛೇದಕತಯಾ ಚ ಜಾತಿವಿಶೇಷಸ್ಯಾವಶ್ಯಕಲ್ಪ್ಯತ್ವಾತ್। ನ ಚ ವರ್ಣಾನುಪೂರ್ವ್ಯೈವ ಪ್ರತೀತ್ಯವಚ್ಛೇದಕತ್ವಯೋರ್ನಿರ್ವಾಹಃ, ಘಟಪಟತ್ವಾದೇರಪಿ ಸಂಯೋಗವಿಶೇಷವಿಶಿಷ್ಟವೃದಾಕಾರಾದಿಭಿಶ್ಚಾನ್ಯಥಾಸಿದ್ಧ್ಯಾಪತ್ತೇಃ। ತಸ್ಮಾತ್ ಸಾ ಜಾತಿರೇವ ವಾಚಿಕಾ ತಾದಾತ್ಮ್ಯೇನ ತದವಚ್ಛೇದಿಕಾ ಚೇತಿ"** ಎಂದು ಒಬ್ಬನೂ **"ಅಲಂಕಾರತ್ವಂ ಚ ರಸಾದಿಭಿನ್ನವ್ಯಂಗ್ಯಭಿನ್ನತ್ವೇ ಸತಿ ಶಬ್ದಾರ್ಥಾನ್ಯತರನಿಷ್ಠಾ ಯಾ ವಿಷಯತಾಸಂಬಂಧಾವಚ್ಛಿನ್ನಾ ಚಮತ್ಕೃತಿಜನಕತಾವಚ್ಛೇದಕತಾ ತದವಚ್ಛೇದಕತ್ವಮ್"**

ಎಂದು ಮತ್ತೊಬ್ಬನೂ ಪ್ರಾರಂಭಿಸಿಬಿಟ್ಟರು ! ನನ್ನ ಹಣೆಯುಬರಹವನ್ನೇನು ಹೇಳುವದು ! ವ್ಯಾಕರಣದವನ ಬಾಯಿಯಲ್ಲೂ ಅವಚ್ಛೇದಕ, ಅಲಂಕಾರದವನ ಬಾಯಿಯಲ್ಲೂ ಅವಚ್ಛೇದಕ !

ಇನ್ನು ನನಗೆ ತಡೆಯುವದಕ್ಕೆ ಆಗಲಿಲ್ಲ. ಕೂಡಲೆ ಇವರಿಬ್ಬರನ್ನೂ ಮಜಲುಮುಟ್ಟಿಸಿಬಿಟ್ಟರೆ ಬದುಕಿದಂತಾದೀತು ! ಎಂಬ ಲವಲವಿಕೆಯಿಂದ ಓಟ ಕಿತ್ತೆನು. ಆದರೆ ಏನು ಹೇಳಲಿ ! ತರ್ಕವಾಕ್ಯದ ಭೀತಿಯಲ್ಲಿ ನನಗೆ ಇಂಥಲ್ಲಿಗೆ ಹೋಗಬೇಕೆಂಬ ನಿಯಮವೇ ಇಲ್ಲದ್ದರಿಂದ ಶಂಕರಮಠದ ಕಡೆಗೆ ಹೋಗುವ ರಸ್ತೆಯನ್ನು ಹಿಡಿದುಬಿಟ್ಟಿದ್ದೆನು ! ಇದಕ್ಕಾಗಿ ಮತ್ತೆರಡು ಬಿಗಿಯಾದ ಏಟುತಿಂದದ್ದಲ್ಲದೆ 'ಅಟ್ಟದಿಂದ ಬಿದ್ದವರನ್ನು ದಡಿಯಿಂದ ಚಚ್ಚಿದರು' ಎಂಬ ಗಾದೆಗನುಸಾರವಾಗಿ ಆ ಮಠದ ಜಗುಲಿಯಮೇಲೂ ಅದನ್ನು ದಾಟಲು ಮುಂದೆ ಉತ್ತರಾದಿಮಠದ ಬಾಗಿಲಿನಲ್ಲೂ ವೇದಾಂತಪಾಠವನ್ನು ಮಾಡುತ್ತಿದ್ದ ವಿದ್ಯಾರ್ಥಿಗಳ ಬಾಯಿಯಲ್ಲಿ ಮತ್ತೆ ಕೆಲವು ಅವಚ್ಛೇದಕಪರಂಪರೆಯ ವಾಕ್ಯಗಳನ್ನು ಕೇಳಬೇಕಾಗಿಬಂದಿತು !

**"ಘಟಾದಿಸಂಯೋಗಿತ್ವಾವಚ್ಛೇದೇನ ಭೂತಲಾದೌ ಜಲಾದಿಸಂಯೋಗವತ್ತ್ವಪ್ರತೀತೇಸ್ತಾದೃಶಸಂಯೋಗಾದಿಸಾಧ್ಯಂ ಪ್ರಸಿದ್ಧಮ್ । ಘಟಾದಿಭೇದೇ ತು ಸಾಧ್ಯಸಾಧನಯೋಃ ಪ್ರಸಿದ್ಧಿಃ ಉಕ್ತಭೇದಸ್ಯ ಕಾಲವೃತ್ತಿತ್ವೇ ಉಕ್ತಭೇದಾಧಿಕರಣ**

ದೇಶಸ್ಯೈವ ತದ್ವೃತ್ತೇಃ ಘಟಾದಿಸಂಯುಕ್ತತ್ವಸ್ಯಾವ್ಯವಚ್ಛೇದ
ಕತ್ವಾತ್ 'ಇದಾನೀಂ ಘಟಸಂಯುಕ್ತದೇಶೇ ಘಟಭೇದಃ'
ಇತಿ ಪ್ರತ್ಯಯಸ್ಯ ಘಟಸಂಯುಕ್ತತ್ವವಿಶಿಷ್ಟೇ ಅನವಚ್ಛೇದಕ
ತ್ವಾವಗಾಹಿತ್ವಾತ್। ಅತ ಏವ ಸಂಯೋಗಾವಚ್ಛಿನ್ನಘಟಾತ್ಯ
ನ್ತಾಭಾವಸ್ಯಾಪಿ ಘಟಸಂಯುಕ್ತದೇಶೇಽಸ್ವೀಕಾರಾತ್ ತದ
ವಚ್ಛೇದೇನ ಕಾಲಾವೃತ್ತಿತ್ವಾತ್ ಘಟಸಂಯುಕ್ತತ್ವಾವಚ್ಛಿನ್ನ
ವೃತ್ತಿಕತ್ವೇನ ತತ್ರ ಸಾಧ್ಯಸ್ಯ ಸಂದಿಗ್ಧತ್ವೇನ ನ ಬಾಧಃ ॥"

ಎಂದು ಮುಂತಾಗಿ ಒಂದು ಕಡೆಯಲ್ಲಿ ವಾಕ್ಯಗಳು ಹೊರಡುತ್ತಿದ್ದವು.

"ನೈವಮ್. ಸಂಬನ್ಧಾನ್ತರಮನ್ತರೇಣ ವಿಶಿಷ್ಟಪ್ರತೀತಿ
ಜನನಯೋಗ್ಯತಾವಚ್ಛೇದಕಾವಚ್ಛಿನ್ನಸ್ವರೂಪಸ್ಯ ಸಂಬನ್ಧ
ತ್ವಾತ್ ಸಂಯೋಗತ್ವಾವಚ್ಛಿನ್ನಸ್ಯ ದಂಡೀತ್ಯಾದೌ ಸಂಬನ್ಧ
ತ್ವವತ್ । ವಿಶಿಷ್ಟಬುದ್ಧಿಶ್ಚಾವಚ್ಛೇದಕಾವಿಷಯಿಣ್ಯೇವಾವ
ಚ್ಛೇದ್ಯಸಮ್ಬನ್ಧವಿಷಯಾ"

ಎಂದು ಮುಂತಾಗಿ ಮತ್ತೊಂದು ಕಡೆ ಸಿಡಿಯುತ್ತಿದ್ದವು! ನನಗೆ ನಿಲ್ಲುವದಕ್ಕೂ ಇಲ್ಲದೆ ಓಡುವದಕ್ಕೂ ಇಲ್ಲದೆ ತಲೆ ಚಿತ್ತಭ್ರಮಣೆಯಿಂದ ತಿರುಗುವದಕ್ಕಾರಂಭಿಸಿತು. ಮೈಯೆಲ್ಲ ಛಳಿಬಂದಂತೆ ನಡುಗಹತ್ತಿತು.

"ಅಯ್ಯೋ ಭಗವಂತ! ನನಗೆ ಈ ತರ್ಕದ ಶನಿ ಎಲ್ಲೆಲ್ಲಿಯೂ ಬೆನ್ನಂಟಿತಲ್ಲ! ಇದಕ್ಕೆ ಪರಿಹಾರವೇನು?" ಎಂದುಕೊಂಡು ಯಜಮಾನನ ಚಾಟಿಯ ಹೊಡೆತವನ್ನೂ ಲಕ್ಷಿಸದೆ, ಗಾಡಿಯಲ್ಲಿ ಕೂತಿದ್ದ ಆ ಹಾಳುಹುಡುಗರ ಅವಚ್ಛೇದಕವಾಕ್ಯಗಳನ್ನೂ ಮನಸ್ಸಿಗೆ ಹತ್ತಿಸಿಕೊಳ್ಳದೆ, ಕಂಡಕಡೆಗೆ ಜಟ್ಕವನ್ನು ಎಳೆದುಕೊಂಡು ನಿಂತಲ್ಲಿ ನಿಲ್ಲದೆ ಓಡಿಬಿಟ್ಟೆನು.

ಈಗ ನನ್ನ ಮನಸ್ಸೇ ನನ್ನ ಅಧೀನವಿಲ್ಲದಂತಾಯಿತು. ಕಾಲುಗಳು ನನ್ನ ಮಾತುಗಳನ್ನು ಕೇಳದೆ ಓಟಕಿತ್ತಿದ್ದವು. ನಾನು ಎಷ್ಟು ಕಾಲ ಓಡಿದೆನೆಂಬುದೇ ತಿಳಿಯಲಿಲ್ಲ. ದಾರಿಯಲ್ಲಿ ಯಾವದೋ ಒಂದು ಮರಕ್ಕೆ ಗಾಡಿಯು ಢಡ್ಡೆಂದು ತಗಲಿ ಅತ್ತಕಡೆಗೆ ಉರುಳಿಕೊಂಡಿತು. ಆದರೆ ಅದುವರೆಗೆ ಚಕ್ರಗಳ ಸದ್ದಿನಿಂದ ನನ್ನ ಕಿವಿಯಲ್ಲಿ ಆಗುತ್ತಿದ್ದ ತರ್ಕಶಬ್ದಗಳ ಹಾವಳಿಯನ್ನು ವರ್ಣಿಸಲಾರೆನು. ಈಗ ಒಂದೊಂದು ಗ್ರಂಥದ ಪಙ್ಕ್ತಿಯು

ಕ್ರಮಕ್ರಮವಾಗಿ ಕೇಳಬರುವದರ ಬದಲಾಗಿ ಎರಡುಮೂರು ಒಂದಕ್ಕೊಂದು ಹೆಣೆದುಕೊಂಡು ಬರುತ್ತಿದ್ದವು. ವಾಕ್ಯದಲ್ಲಿದ್ದ ಕೆಲವು ಪದಗಳು ಹಾರಿ ಹೋಗಿ ಅವುಗಳ ಸ್ಥಾನದಲ್ಲಿ ನಾನು ಎಂದೂ ಕೇಳದೆ ಇರುವ ಬೇರೆ ಕೆಲವು ಪದಗಳು ಸೇರಿಕೊಂಡಿರುತ್ತಿದ್ದವು. ಕೆಲವು ಅಸಂಬದ್ಧವಾದ ಪದಗಳೂ ಹೇಗೋ ಎಲ್ಲಿಂದಲೋ ತೂರಿಕೊಂಡು ಬಂದು ಸೇರಿದ್ದವು. ಉದಾಹರಣೆಗೆ ಒಂದು ಸಾಲನ್ನು ಕೇಳು :—

"ಘಟತ್ವನಿಷ್ಠಪ್ರಕಾರತಾನಿರೂಪಿತ ವಿಶೇಷ್ಯತ್ವಾವಚ್ಛಿನ್ನನಿಷ್ಠತ್ವನಿಷ್ಠಪ್ರಕಾರತಾನಿರೂಪಿತ ವಿಶೇಷ್ಯತ್ವಾವಚ್ಛಿನ್ನಪ್ರಕಾರತ್ವನಿಷ್ಠಪ್ರಕಾರತಾನಿರೂಪಿತವಿಶೇಷ್ಯತ್ವಾವಚ್ಛಿನ್ನನಿರೂಪಕತ್ವನಿಷ್ಠಪ್ರಕಾರತಾನಿರೂಪಿತ ವಿಶೇಷ್ಯತ್ವಾವಚ್ಛೇದಕತ್ವನಿಷ್ಠಪ್ರಕಾರತಾನಿರೂಪಿತಲಕ್ಷಣಶಾಸ್ತ್ರಿನಿಷ್ಠಾವಿವೇಕಿತಾನಿರೂಪಿತ ಹಸನ್ನಾಮಧೇಯನಿಷ್ಠಪ್ರಕಾರತಾನಿರೂಪಿತ ಜಟ್ಕಾನಿಷ್ಠ ವಿಶೇಷ್ಯತಾನಿರೂಪಿತ ಕಿಡಕಿಡತಾವಚ್ಛೇದಕನಿಷ್ಠಪ್ರಕಾರತಾನಿರೂಪಿತ ಥಕ್ಕಥೈಧರ್ಮಾವಚ್ಛಿನ್ನಪ್ರಧಾವನಾನಿರೂಪಿತರಥ್ಯಾನಿಷ್ಠ........"

ನನ್ನ ಹಿಂದೆ ಆ ಮುಸಲ್ಮಾನನು ಬಾರುಕೋಲಿನೊಡನೆ ಬರುತ್ತಾನೇನೋ ಎಂದು ಒಂದು ಸಲ ಹಿಂದಕ್ಕೆ ನೋಡಿದೆ. ದೂರಕ್ಕೆ ಏನೋ ಕರ್ರಗೆ ಕಾಣಿಸಿತು. ಅವನ ವಿಗ್ರಹವೇ ಇರಬೇಕೆಂಬ ಭಾವನೆಯು ಮನಸ್ಸಿನೊಳಗೆ ಮೂಡುತ್ತಲೂ ಮತ್ತೆ ಓಡುವದಕ್ಕಾರಂಭಿಸಿದೆನು. ಈಗ ಗಾಡಿಯ ಭಾರವೂ ಇಲ್ಲ, ಜನರ ಸಂದಣಿಯ ಶಬ್ದವೂ ಇಲ್ಲ, ತರ್ಕದ ಪಜ್ಕ್ತಿಗಳ ಕಾಟವೂ ಇಲ್ಲ- ಎಂಬ ಸಂತೋಷದಿಂದ ನನಗೆ ಮತ್ತಷ್ಟು ಬಲ ಬಂದಂತಾಯಿತು. ಕೂಡಲೆ ಹೊರಟೆನು, ಈಶಾನ್ಯದಿಕ್ಕಿಗೆ. ಬಯಲುದೇಶದಲ್ಲಿ ತಂಗಾಳಿಯ ಸೇವನೆಯಿಂದಲೂ 'ಕಡೆಗೆ ನಾನೊಬ್ಬನೇ ಉಳಿದುಕೊಂಡು ಬದುಕಿದೆನಲ್ಲ!' ಎಂಬ ಹಿಗ್ಗಿನಿಂದಲೂ ಆಯಾಸವು ಒಂದಿಷ್ಟೂ ತೋರದೆ ಉತ್ಸಾಹವೇ ಹೆಚ್ಚುತ್ತಿದ್ದದ್ದರಿಂದ ಮುಂದುಮುಂದಕ್ಕೆ ಓಡುತ್ತಲೇ ಇದ್ದೆನು. ನಡುವೆ ಒಂದೆರಡು ರಾತ್ರಿಯೂ ಕಳೆದವು, ಆದರೆ ನಾನು ಮಾತ್ರ ಎಲ್ಲಿಯೂ ನಿಲ್ಲಲಿಲ್ಲ. ಓಡು

ತ್ತಲೇ ಇದ್ದೆನು. ಹೀಗಿರುವಲ್ಲಿ ಮಾರ್ಗದಲ್ಲಿ ಒಂದು ಇಂಪಾದ ಗಾನವು ಕೇಳಬಂದಿತು. ಕಿವಿಗೊಟ್ಟು ಕೇಳುವಲ್ಲಿ ಈ ಶ್ಲೋಕವಾಗಿತ್ತು :—

"ಘಟೋ ವಾ ಮೃತ್ಪಿಂಡೋಽಪ್ಯಣುರಪಿ ಚ ಧೂಮೋಽಗ್ನಿರಚಲಃ
ಪಟೋ ವಾ ತಂತುರ್ವಾ ಪರಿಹರತಿ ಕಿಂ ಘೋರಶಮನಮ್ ।
ವೃಥಾ ಕಣ್ಠಕ್ಷೋಭಂ ವಹಸಿ ತರಸಾ ತರ್ಕವಚಸಾ
ಪದಾಂಭೋಜಂ ಶಂಭೋರ್ಭಜ ಪರಮಸೌಖ್ಯಂ ವ್ರಜ ಸುಧೀಃ॥"

(ಭಾವಾರ್ಥ :— ಅಪ್ಪ, ನೀನು ಬುದ್ಧಿವಂತನು, ತಿಳಿದುನೋಡು : ಗಡಿಗೆಯಾಗಲಿ ಮಣ್ಣಿನ ಮುದ್ದೆಯಾಗಲಿ, ಪರಮಾಣುವಾಗಲಿ, ಹೊಗೆಯಾಗಲಿ, ಬೆಂಕಿಯಾಗಲಿ, ಬೆಟ್ಟವಾಗಲಿ, ಬಟ್ಟೆಯಾಗಲಿ, ನೂಲಾಗಲಿ, ಭಯಂಕರನಾದ ಯಮನಿಂದ ಬಿಡುಗಡೆ ಮಾಡೀತೇನು ? ಬೇಗಬೇಗನೆ ಉರುಳುವ ತರ್ಕವಾಕ್ಯದಿಂದ ಸುಮ್ಮನೆ ಗಂಟಲು ಒಣಗುವಿಕೆಯನ್ನು ಮಾಡಿಕೊಳ್ಳುತ್ತಿರುವೆಯಲ್ಲ ! ಶಂಭುವಿನ ಪದಕಮಲವನ್ನು ಭಜಿಸು, ಪರಮಸೌಖ್ಯವನ್ನು ಹೊಂದು.)

ಇದನ್ನು ಕೇಳಿ ನನಗೆ ಪರಮಾಶ್ಚರ್ಯವಾಯಿತು. "ಯಾರಾದರೂ ನನಗೋಸ್ಕರವಾಗಿ ಈ ಪದ್ಯವನ್ನು ಆರಿಸಿಕೊಂಡು ಹಾಡುತ್ತಿರುವರೋ ಏನು ? ಇದುವರೆಗೂ ನಾನು ಘಟಪಟಾದಿಶಬ್ದಗಳಿಂದೊಡಗೂಡಿದ ತರ್ಕವಾಕ್ಯಗಳನ್ನು ಸತತವಾಗಿ ಜಪಿಸಿ ಕಂಠಕ್ಷೋಭವನ್ನು ಮಾಡಿಕೊಂಡು ಈ ಕುದುರೆಯ ಜನ್ಮಕ್ಕೆ ಇಳಿದದ್ದಲ್ಲದೆ ಅದೇ ಶಬ್ದವನ್ನು ಇದುವರೆಗೂ ಕೇಳಿಕೇಳಿ ಕಿವಿಗೂ ಕ್ಷೋಭವನ್ನುಂಟುಮಾಡಿಕೊಂಡದ್ದಾಯಿತು. ಎಲೈ ಶಂಭುವೆ, ನೀನು ಪಶುಪತಿಯೆಂದು ಪ್ರಸಿದ್ಧನಾಗಿರುವೆ. ನಾನು ಮೊದಲು ಈ ತರ್ಕದ ಪಾಶಕ್ಕೆ ಕಟ್ಟುಬಿದ್ದು, ಆಮೇಲೆ ಮದಮಾನಮತ್ಸರಾದಿಗಳಿಂದ ಬಿಗಿಯಲ್ಪಟ್ಟು, ಕೊನೆಗೆ ನಿಜವಾಗಿಯೂ ಪಶುವೇ ಆಗಿಬಿಟ್ಟಿರುವೆನು. ಯಾವ ಪೂರ್ವಜನ್ಮದಲ್ಲಿ ಮಾಡಿದ ಪುಣ್ಯದಿಂದಲೋ ಇಂದು ನಿನ್ನ ಪದಕಮಲದಲ್ಲಿ ದೊರೆಯುವ ಪರಮಸೌಖ್ಯವನ್ನು ನೆನಪುಗೊಡುವ ಮಂಗಲಗಾನವು ಕಿವಿಗೆ ಅಮೃತಧಾರೆಯಾಗಿ ಬಿದ್ದಿರುವದು. ಇನ್ನುಮೇಲಾದರೂ ನಿಶ್ಚಲವಾದ ಭಕ್ತಿಯಿಂದ ನಿನ್ನ ಸ್ಮರಣೆಯನ್ನು ಮಾಡುತ್ತಿರುವಂತೆ ನನಗೆ ಅನುಗ್ರಹಿಸು !" ಎಂದು ಮನಸ್ಸಿನಲ್ಲಿ ಪ್ರಾರ್ಥನೆಮಾಡಿಕೊಂಡೆನು. ಇಷ್ಟರಲ್ಲಿ ಮತ್ತೊಂದು ಶ್ಲೋಕವು ಗಾಯಕನ ಕಂಠದಿಂದ ಹೊರಹೊಮ್ಮಿತು :—

"ನರತ್ವಂ ದೇವತ್ವಂ ನಗವನಮೃಗತ್ವಂ ಮಶಕತಾ
ಪಶುತ್ವಂ ಕೀಟತ್ವಂ ಭವತು ವಿಹಗತ್ವಾದಿಜನನಮ್ ।
ಸದಾ ತ್ವತ್ಪಾದಾಬ್ಜಸ್ಮರಣಪರಮಾನಂದಲಹರೀ
ವಿಹಾರಾಸಕ್ತಂ ಚೇದ್ಧೃದಯಮಿಹ ಕಿಂ ತೇನ ವಪುಷಾ ॥"

(ಭಾವಾರ್ಥ:— ಮನುಷ್ಯಜನ್ಮವಾದರೂ ಬರಲಿ, ದೇವತೆಯ ಜನ್ಮವಾದರೂ ಬರಲಿ, ಅಥವಾ ಮರದ, ಕಾಡುಜಿಂಕೆಯ, ಸೊಳ್ಳೆಯ, ಪಶುವಿನ, ಹುಳುಹುಪ್ಪಟೆಯ ಅಥವಾ ಹಕ್ಕಿಯ ಜನ್ಮವೇ ಮುಂತಾದ ಯಾವ ಜನ್ಮವಾದರೂ ಬರಲಿ ! ಪರಮೇಶ್ವರನೆ, ಯಾವಾಗಲೂ ಹೃದಯವು ನಿನ್ನ ಚರಣಕಮಲದ ಸ್ಮರಣೆಯೆಂಬ ಪರಮಾನಂದಲಹರಿಯಲ್ಲಿ ಈಜಾಡುವದರಲ್ಲಿಯೇ ನಿರತವಾಗಿದ್ದರೆ ಸಾಕು, ಯಾವ ಶರೀರವಿದ್ದರೇನು ?)

ನಾನು "ಭಲೆ ! ನನಗಾಗಿಯೇ ಯಾರೋ ಮಹಾತ್ಮರು ಈ ದಿವ್ಯ ಗಾನವನ್ನು ಪ್ರಾರಂಭಿಸಿದ್ದಾರೆಂಬುವದರಲ್ಲಿ ಸಂಶಯವಿಲ್ಲ. ನನಗೆ ಪಶುಜನ್ಮವು ಬಂದಮಾತ್ರಕ್ಕೆ ನಿರಾಶನಾಗಬೇಕಾದದ್ದಿಲ್ಲವೆಂದು ಪ್ರೋತ್ಸಾಹಿಸುವದಕ್ಕಲ್ಲವೆ, ಈ ಶ್ಲೋಕವು ಹೊರಟಿರುವದು ? ಆದರೆ ಈ ಸಮಯದಲ್ಲಿ ನನಗೆ ಪರಮೇಶ್ವರನ ಸ್ವರೂಪವನ್ನು ತಿಳಿಸಿಕೊಡುವವರು ಯಾರು ? ಆತನಲ್ಲಿ ಭಕ್ತಿಯಿಡುವ ಮಾರ್ಗವನ್ನಾದರೂ ನಾನು ಹೇಗೆ ಕಲಿತುಕೊಳ್ಳಲಿ ?" ಎಂದುಕೊಳ್ಳುವಷ್ಟರಲ್ಲಿ ಮತ್ತೊಂದು ಶ್ಲೋಕವು ಕೇಳಬಂತು :—

"ಯದಾ ಕಿಂಚಿಜ್ಞೋಽಹಂ ಗಜ ಇವ ಮದಾನ್ಧಃ ಸಮಭವಂ
ತದಾ ಸರ್ವಜ್ಞೋಽಸ್ಮೀತ್ಯಭವದವಲಿಪ್ತಂ ಮಮ ಮನಃ ।
ಯದಾ ಕಿಂಚಿತ್ ಕಿಂಚಿದ್ಬುಧಜನಸಕಾಶಾದವಗತಂ
ತದಾ ಮೂರ್ಖೋಽಸ್ಮೀತಿ ಜ್ವರ ಇವ ಮದೋ ಮೇ ವ್ಯಪಗತಃ ॥"

(ಭಾವಾರ್ಥ :— ನನಗೆ ಎಲ್ಲಿಯೋ ಒಂದಿಷ್ಟು ತಿಳಿದಿದ್ದು ಆನೆಯಂತೆ ನಾನು ಮದಾಂಧನಾಗಿದ್ದಾಗ 'ನಾನು ಸರ್ವಜ್ಞನು' ಎಂಬ ಅಹಂಕಾರವು ಮನಸ್ಸಿನಲ್ಲಿ ತುಂಬಿಕೊಂಡಿದ್ದಿತು. ಆದರೆ ತಿಳಿದವರಿಂದ ಸ್ವಲ್ಪಸ್ವಲ್ಪವಾಗಿ ತಿಳಿವಳಿಕೆಯನ್ನು ಸಂಪಾದಿಸಿಕೊಂಡ ಮೇಲೆ 'ಅಯ್ಯೋ ! ನಾನು ಮೂರ್ಖನು !' ಎಂಬುದು ಮನವರಿಕೆಯಾಗಿ ಮೊದಲಿನ ಮದವು ಜ್ವರದಂತೆ ಹೋಗಿಬಿಟ್ಟಿತು.)

"ಇನ್ನು ಯೋಚಿಸಬೇಕಾದದ್ದಿಲ್ಲ. ಇಲ್ಲಿ ಯಾರೋ ನನಗೆ ಉಪದೇಶ ಮಾಡುವದಕ್ಕೆಂದೇ ಈ ಶ್ಲೋಕಗಳನ್ನು ಹಾಡುತ್ತಿದ್ದಾರೆ. ಹಾಗಿಲ್ಲದಿದ್ದರೆ ಇವರಿಗೆ ನಾನು ತರ್ಕಶಾಸ್ತ್ರಜ್ಞಾನದಿಂದ ಮತ್ತನಾಗಿದ್ದದ್ದೂ ಈ ದಿನ ನನಗೆ

ಪಶ್ಚಾತ್ತಾಪವಾಗಿರುವುದೂ ಹೇಗೆ ತಿಳಿಯಬೇಕು ?" ಎಂದು ಮನಸ್ಸಿನಲ್ಲಿ ಯೋಚಿಸುತ್ತಾ "ಹೇಗಾದರೂ ಆಗಲಿ, ಸಾಧುಗಳ ದರ್ಶನವು ದೊರೆತರೆ ಸಕಲ ಪಾಪಗಳೂ ನಿವೃತ್ತಿಯಾಗುವವು, ಮನಸ್ಸಿನ ತಾಪವು ಹರಿದು ಹೋಗುವದು, ದೀನತ್ವವು ತೊಲಗುವದು - ಎಂದು ಹಿರಿಯರು ಹೇಳಿದ್ದನ್ನು ಕೇಳಿದೇನೆ. ಮಾರ್ಗಾಯಾಸದಿಂದಲೂ ಮನಸ್ಸಿನ ಕ್ಲೇಶದಿಂದಲೂ ಸಂತಪ್ತನಾಗಿರುವ ನನಗೆ ಇವರ ಪಾದಮೂಲವೇ ಗತಿ" ಎಂದುಕೊಂಡು ಆ ಧ್ವನಿಯು ಬರುತ್ತಿದ್ದ ಕಡೆಗೆ ಹೋದೆನು. ಸ್ವಲ್ಪದೂರದಲ್ಲಿ ಒಂದು ದಿಣ್ಣೆಯ ಮೇಲೆ ಒಬ್ಬರು ಸಂನ್ಯಾಸಿಗಳು ಕುಳಿತಿದ್ದರು. ಅವರೇ ಈ ಶ್ಲೋಕವನ್ನು ಹಾಡುತ್ತಿದ್ದರೆಂಬುದಕ್ಕೆ ಸಂದೇಹವೇ ಉಳಿಯಲಿಲ್ಲ. ಏಕೆಂದರೆ ನಾನು ಅವರ ಬಳಿಗೆ ಹೋಗುವ ವೇಳೆಗೆ ಅವರು ಮತ್ತೊಂದು ಶ್ಲೋಕವನ್ನು ಪ್ರಾರಂಭಿಸಿದರು :—

"ಭೋಗೇ ರೋಗಭಯಂ ಕುಲೇ ಚ್ಯುತಿಭಯಂ ವಿತ್ತೇ ನೃಪಾಲಾದ್ಭಯಂ
ಮಾನೇ ದೈನ್ಯಭಯಂ ಬಲೇ ರಿಪುಭಯಂ ರೂಪೇ ಜರಾಯಾ ಭಯಮ್ ।
ಶಾಸ್ತ್ರೇ ವಾದಭಯಂ ಗುಣೇ ಖಲಭಯಂ ಕಾಯೇ ಕೃತಾನ್ತಾದ್ಭಯಂ
ಸರ್ವಂ ವಸ್ತು ಭಯಾನ್ವಿತಂ ಭುವಿ ನೃಣಾಂ ವೈರಾಗ್ಯಮೇವಾಭಯಮ್ ॥"

(ಭಾವಾರ್ಥ :— ವಿಷಯಭೋಗಕ್ಕೆ ರೋಗದ ಭಯವುಂಟು ; ಕುಲಕ್ಕೆ ಆಚಾರಭ್ರಷ್ಟನಾಗುವ ಭಯವುಂಟು ; ಹಣಕ್ಕೆ ಸರಕಾರದ ಭಯವುಂಟು ; ಅಭಿಮಾನಕ್ಕೆ ಬಡತನದ ಭಯವುಂಟು ; ಬಲಕ್ಕೆ ಶತ್ರುಗಳ ಭಯವುಂಟು ; ಸೌಂದರ್ಯಕ್ಕೆ ಮುಪ್ಪಿನ ಭಯವುಂಟು ; ಶಾಸ್ತ್ರಕ್ಕೆ ವಾದದ ಭಯವುಂಟು ; ಸದ್ಗುಣಕ್ಕೆ ದುಷ್ಟರ ಭಯವುಂಟು ; ಶರೀರಕ್ಕೆ ಯಮನ ಭಯವುಂಟು. ಈ ಲೋಕದಲ್ಲಿ ಒಂದೊಂದು ವಸ್ತುವಿಗೂ ಭಯವಿದೆ. ಆದರೆ ವೈರಾಗ್ಯವಿದ್ದರೆ ಮಾತ್ರ ಜನರಿಗೆ ಯಾವ ಭಯವೂ ಇಲ್ಲ.)

ಈ ಅರ್ಧರಾತ್ರಿಯಲ್ಲಿ ಬೆಳುದಿಂಗಳಲ್ಲಿ ಕೌಪೀನವನ್ನು ಧರಿಸಿ ಪಕ್ಕದಲ್ಲಿ ಕಮಂಡಲುವನ್ನು ಇಟ್ಟುಕೊಂಡು ಕುಳಿತಿದ್ದ ಆ ಯತೀಶ್ವರರ ಸಂದರ್ಶನವಾದ ಕೂಡಲೆ ನನಗೆ "ನಿಜವಾಗಿ ಇವರು ಬಾಯಿಮಾತಿನವರಲ್ಲ, ಪರಮವೈರಾಗ್ಯ ಚಕ್ರವರ್ತಿಗಳು. ಇಂಥವರ ದರ್ಶನವು ಪಾಪಿಯಾದ ನನಗೆ ಸಿಕ್ಕುವದು ಪರಮೇಶ್ವರನ ಅನುಗ್ರಹವಲ್ಲದೆ ಮತ್ತೇನು ?" ಎಂಬ ಯೋಚನೆಯು ಮನಸ್ಸಿಗೆ ಬಂದಿತು.

ಅವರು ನನ್ನನ್ನು ಕಾಣುತ್ತಲೆ, "ಅಪ್ಪ, ನಿನ್ನ ಸ್ಥಿತಿಯನ್ನು ಹೇಳಿಕೊಳ್ಳುವದಕ್ಕೆ ನಿನಗೆ ಬಾಯಿಯಿಲ್ಲವಾದರೂ ಪರಮೇಶ್ವರನ ಅನುಗ್ರಹದಿಂದ ನಮಗೆ ಎಲ್ಲವೂ ತಿಳಿದುಬಂದಿದೆ. ನಾವು ಯಾರೋ- ಎಂದು ಯೋಚಿಸಬೇಡ, ನವದ್ವೀಪದಲ್ಲಿ ನಿನಗೆ ತರ್ಕದಲ್ಲಿ ಬಾಲಪಾಠಹೇಳುತ್ತಿದ್ದ ಕೇಶವಶಾಸ್ತ್ರಿಯ ನೆನಪು ಇದೆಯೆ? ನಿನ್ನಿಂದ ಆ ಶಾಸ್ತ್ರದಲ್ಲಿ ವಾದಜಿತನಾದ ಮೇಲೆ ಅವನು ಮನಸ್ಸಿನಲ್ಲಿ ಅತ್ಯಂತವಾಗಿ ವ್ಯಾಕುಲಪಟ್ಟು ಇನ್ನು ನವದ್ವೀಪದಲ್ಲಿ ಯಾರಿಗೂ ಮುಖವನ್ನು ತೋರಿಸಬಾರದೆಂದು ನಿಶ್ಚಯಿಸಿ ಕಾಶಿಗೆ ಹೊರಟುಹೋದನು. ಅಲ್ಲಿ ಮಹಾತ್ಮರಾದ ಚಿದ್ಘನಾನಂದಸರಸ್ವತಿಗಳೆಂಬ ಸಂನ್ಯಾಸಿಗಳ ಸಂಗವು ಇವನಿಗೆ ಹೇಗೋ ಪೂರ್ವಪುಣ್ಯದಿಂದ ದೊರೆಯಿತು. ಅವರು ಕೇಶವಶಾಸ್ತ್ರಿಯನ್ನು ತಮ್ಮ ಬಳಿಯಲ್ಲಿರಿಸಿಕೊಂಡು ತರ್ಕಶಾಸ್ತ್ರವನ್ನು ಪೂರ್ಣವಾಗಿ ಹೇಳಿಕೊಟ್ಟಿದ್ದಲ್ಲದೆ ಕೊನೆಗೆ ತರ್ಕಶಾಸ್ತ್ರದ ಖಂಡನೆಯರೂಪವಾಗಿರುವ ಖಂಡನಖಂಡಖಾದ್ಯವೆಂಬ ಅಮೋಘವಾದ ಗ್ರಂಥವನ್ನೂ ಹೇಳಿಕೊಟ್ಟರು. ಅಷ್ಟುಹೊತ್ತಿಗೆ ಕೇಶವಶಾಸ್ತ್ರಿಗೆ ಗಂಗಾಸ್ನಾನ, ವಿಶ್ವೇಶ್ವರದರ್ಶನ, ಚಿದ್ಘನಾನಂದರ ಶುಶ್ರೂಷೆ - ಇವುಗಳ ಪ್ರಭಾವದಿಂದ ಸಂಸಾರದಲ್ಲಿ ಪರಮವೈರಾಗ್ಯವು ಹುಟ್ಟಿ ಅವನು ಆ ಯತಿವರ್ಯರಿಂದಲೇ ಸಂನ್ಯಾಸಸ್ವೀಕಾರವನ್ನು ಮಾಡಿದನು. ಬಾದರಾಯಣೀಯಪ್ರಣೀತವಾದ ವೇದಾಂತದರ್ಶನವನ್ನು ಶಾಂಕರಭಾಷ್ಯಸಮೇತವಾಗಿ ಅವರಲ್ಲಿ ಪಾಠಮಾಡುವ ಹೊತ್ತಿಗೆ ತರ್ಕವು ಅಪ್ರತಿಷ್ಠಿತವೆಂಬುವನ್ನೂ, ವಾದವು ಖೇದಾವಹವೆಂಬುವನ್ನೂ, ಅನುಭವದಿಂದ ಗಮ್ಯವಾಗಿರುವ ಪರಮಾನಂದತತ್ತ್ವವನ್ನು ತಿಳಿಯಿಸುವ ವೇದಾಂತದ ಮುಂದೆ ಇನ್ನುಯಾವ ದರ್ಶನವೂ ನಿಲ್ಲಲಾರದೆಂಬುವನ್ನೂ ಮನಗಂಡನು. ಗುರುಗಳ ಅನುಜ್ಞೆಯನ್ನು ಪಡೆದು ಪರಮಾತ್ಮನ ಧ್ಯಾನದಲ್ಲಿಯೇ ಕಾಲವನ್ನು ಕಳೆಯುತ್ತಾ ದಕ್ಷಿಣದೇಶಕ್ಕೆ ತೀರ್ಥಾಟನೆಯ ನಿಮಿತ್ತವಾಗಿ ಹೊರಟುಬಂದಿರುವ ಸ್ವರೂಪಾನಂದಸರಸ್ವತಿಯೆಂಬ ಹೆಸರಿನ ಆ ವ್ಯಕ್ತಿಯೇ ನಿನ್ನ ಕಣ್ಣ ಮುಂದಿರುವವದೆಂದು ತಿಳಿ. ಇಗೋ, ಇದು ಹರಿಹರಕ್ಷೇತ್ರವು ; ಇಲ್ಲಿಗೆ ನೀನು ಬರುವದಾದರೆ ನಿನಗೆ ಮಿಕ್ಕಸಂಗತಿಗಳು ತಾವೇ ತಿಳಿಯಬರುವವು"- ಎಂದು ಹೇಳುತ್ತಾ ಕಮಂಡಲುವಿನಿಂದ ಪವಿತ್ರೋದಕವನ್ನು ತೆಗೆದು ನನ್ನ ಮೈಮೇಲೆ ಎರಚಿದರು. ಆ ಕೂಡಲೆ ನನ್ನ

ಮೈಯಲ್ಲೆಲ್ಲ ಒಂದು ವಿಧವಾದ ಹೊಸ ಪರಿಣಾಮವುಂಟಾಗಿ ಮೈಕೊಡವಿಕೊಂಡೆನು.

೮

ಈಗ ನನ್ನ ಜೀವನಚರಿತ್ರೆಯ ನಾಟಕದಲ್ಲಿ ಒಂದು ಅಂಕದ ಪರದೆಯು ಬಿದ್ದು ಮತ್ತೊಂದು ಮೇಲಕ್ಕೆದ್ದಿತು. ಏಕೆಂದರೆ ನಾನು ಮಹಾತ್ಮರ ಉಪದೇಶ ಸೇಚನದ ಪರಿಣಾಮವನ್ನು ಕುರಿತು ಯೋಚಿಸಿಕೊಳ್ಳುವದಕ್ಕೆ ಅರ್ಧಕ್ಷಣದಷ್ಟು ವಿರಾಮವಿಲ್ಲದಂತೆ, ನನಗೆ ಕನಸಿನಿಂದ ಎಚ್ಚತ್ತ ಹಾಗೆ ಆಯಿತು. ಈಗ ನಾನು ಯತಿಗಳೆದುರಿಗೆ ಕುಮಾರಿಯಾಗಿ ನಿಂತಿರುವದಕ್ಕೆ ಬದಲಾಗಿ, ಕಲಿಕತ್ತೆಯಲ್ಲಿ ಮೊದಲಿನೆಯ ಲಕ್ಷಣಶಾಸ್ತ್ರಿಯೇ ಆಗಿ ಮಂಚದ ಮೇಲೆ ಮಲಗಿದ್ದೇನೆ! ನಮ್ಮ ತಾಯಿಯು ಬಂದು "ಮಗೂ ಲಕ್ಷ್ಮಣ, ಗಂಗೆಗೆ ಹೋಗಿಬರುವದಿಲ್ಲವೆ? ಈ ದಿನ ನಿನ್ನ ತರ್ಕದ ಕ್ಷೇತ್ರಪತ್ರಪಾತ ಎಷ್ಟು ಹೊತ್ತಾಯಿತಪ್ಪ! ಹಾಲು ಸಿದ್ಧವಾಗಿದೆ. ನೀನೇಕೆ ಬರಲಿಲ್ಲವೆಂಬುದು ಗೊತ್ತಾಗದೆ ಇಲ್ಲಿಗೆ ಬಂದೆ" ಎಂದಳು. ಇದುವರೆಗೆ ನಾನು ಕುಮಾರಿಯಾಗಿ ಪಡಬಾರದ ಕಷ್ಟವನ್ನು ಅನುಭವಿಸಿದ್ದು, ಸಂನ್ಯಾಸಿಗಳ ದರ್ಶನವಾದದ್ದು–ಇವೆಲ್ಲ ಬರಿಯ ಕನಸೆ? ನಿಜವಾಗಿಯೂ ನಾನು ಮನೆಯಲ್ಲಿಯೇ ಇದ್ದುಬಿಟ್ಟೆನೆ?– ಎಂಬ ಯೋಚನೆಯು ಈಗ ಬಲವಾಗಿ ಹತ್ತಿಕೊಂಡಿತು. ಆದ್ದರಿಂದ ತಾಯಿಗೆ ಯಾವ ಉತ್ತರವನ್ನೂ ಹೇಳದೆ ತಟ್ಟನೆ ಎದ್ದು ಗಂಗಾನದಿಗೆ ಹೋಗಿಬಿಟ್ಟೆನು.

ಆ ದಿನ ಸ್ನಾನಕ್ಕೆ ನಾನು ಹೋಗುವ ವೇಳೆಗೆ ಕೇಶವಶಾಸ್ತ್ರಿಯ ತಂದೆ ಶ್ರೀರಾಮಬುವಾ ಎಂಬ ವೃದ್ಧರು ನದಿಯ ಬಳಿಗೆ ಬಂದರು. ನನಗೆ ಅವರ ಪರಿಚಯವು ಅಷ್ಟಾಗಿ ಇಲ್ಲದಿದ್ದರೂ ಅವರು ಮಾತ್ರ ನನ್ನನ್ನು ಗುರುತಿಸಿ "ಲಕ್ಷಣಶಾಸ್ತ್ರಿಗಳೆ, ತಮ್ಮಲ್ಲಿ ಒಂದು ಕೆಲಸಕ್ಕೆ ಬಂದಿದ್ದೇನೆ. ನನಗಿದ್ದ ಒಬ್ಬನೇ ಒಬ್ಬ ಹುಡುಗ ಕೇಶವಶಾಸ್ತ್ರಿಯು ನವದ್ವೀಪದಲ್ಲಿ ತಮ್ಮ ಸಹಪಾಠಿಯಾಗಿದ್ದದ್ದು ತಮಗೆ ನೆನಪಿರಬಹುದು. ಈಚೆಗೆ ಅವನು ಕಾಶಿಗೆ ಬಂದು ಶಾಸ್ತ್ರಾಭ್ಯಾಸ ಮಾಡುತ್ತಿದ್ದವನು ಇದ್ದಕ್ಕಿದ್ದ ಹಾಗೆಯೆ ಮಾಯವಾಗಿರುತ್ತಾನೆ. ಕಾಶಿಯಲ್ಲಿದ್ದ ರಮಾನಂದ ದೈವಜ್ಞ ಎಂಬಾತನಲ್ಲಿ ಪ್ರಶ್ನೆ ಕೇಳಲಾಗಿ ತಮ್ಮನ್ನು ಕೇಳಿದರೆ ತಿಳಿಯಬರುವದೆಂದು ಹೇಳಿರುತ್ತಾನೆ. ಆ ವಿಷಯವೇನಾದರೂ ತಮಗೆ ತಿಳಿದಿದ್ದರೆ ದಯಮಾಡಿ ಹೇಳಬೇಕು. ಈ ಅರವತ್ತನೆಯ ವಯಸ್ಸಿನಲ್ಲಿ ದಿಕ್ಕಿಲ್ಲದೆ

ನರಳುತ್ತಿರುವ ನನಗೆ ತಾವು ಹೊಸದಾಗಿ ಪುತ್ರದಾನಮಾಡಿದ ಪುಣ್ಯವು ಲಭಿಸುತ್ತದೆ'' ಎಂದರು.

ನನಗೆ ಸಿಡಿಲು ಬಡಿದಂತಾಯಿತು. ರಾಮಬುವನಿಗೆ ಏನೊಂದು ಉತ್ತರವನ್ನು ಕೊಡುವದೂ ನನ್ನಿಂದಾಗಲಿಲ್ಲ. "ನನಗೇನೋ ಸರಿಯಾಗಿ ಗೊತ್ತಿಲ್ಲವಾದರೂ ಆತನು ನನ್ನ ಕಣ್ಣಿಗೆ ಬಿದ್ದರೆ ಅವಶ್ಯವಾಗಿ ನಿಮ್ಮಾರ್ವರ ಭೇಟಿಮಾಡಿಸುವೆನು. ನಾನೂ ಆತನನ್ನು ನೋಡಬೇಕಾದ ಜರೂರುಕೆಲಸವಿದೆ" ಎಂದಿಷ್ಟೇ ಉತ್ತರವನ್ನು ಹೇಳಿ ಸ್ನಾನಾಹ್ನಿಕವನ್ನು ಸ್ವಲ್ಪದರಲ್ಲಿಯೇ ಪೂರೈಸಿಕೊಂಡು ನೆಟ್ಟಗೆ ಮನೆಗೆ ಬಂದುಬಿಟ್ಟೆನು. ಮನೆಯಲ್ಲಿ ನನಗೆ ಸಂಭಾವನೆಯಾಗಿ ಬಂದಿದ್ದ ಹಣದಲ್ಲಿ ಒಂದು ನೂರು ರೂಪಾಯಿ ಕೈಯಲ್ಲಿ ತೆಗೆದುಕೊಂಡು ತಾಯಿಯು ಹಾಲತಿಗೆಮುಕೊಳ್ಳೆಂದರೂ ಕಿವಿಗೆ ಹಾಕಿಕೊಳ್ಳದೆ ನೇರಾಗಿ ರೈಲ್ವೆಸ್ಟೇಷನ್ನಿಗೆ ಹೋಗಿ ಟಿಕೆಟ್ಟನ್ನು ಕೊಂಡುಕೊಂಡೆನು.

ಹರಿಹರವು ಕಲಕತ್ತೆಗೆ ಇಷ್ಟೊಂದು ದೂರವಿರುವದೆಂಬುದು ಆಗತಾನೆ ನನಗೆ ತಿಳಿಯಿತಾದರೂ ನಡುವೆ ಎಲ್ಲಿ ಇಳಿಯುವದೂ ನನ್ನ ಮನಸ್ಸಿಗೆ ಬರಲಿಲ್ಲ. ದಾರಿಯಲ್ಲಿ ಯಾರು ಮಾತನಾಡಿಸಿದರೂ ನನಗೆ ಯಾವ ಸಂಭಾಷಣೆಯೂ ಬೇಕಾಗಲಿಲ್ಲ. ದಾರಿಯಲ್ಲಿ ನೀರು ಸಿಕ್ಕಿದ ಕಡೆ ಸಂಧ್ಯಾವಂದನೆಯನ್ನು ನೆರವೇರಿಸಿಕೊಳ್ಳುವದು, ನಡುನಡುವೆ ಅಲ್ಲಲ್ಲಿ ಸ್ವಲ್ಪ ಹಾಲನ್ನೂ ಹಣ್ಣನ್ನೂ ತೆಗೆದುಕೊಳ್ಳುವದು— ಇಷ್ಟುಮಾತ್ರ ಮಾಡುತ್ತಾ ಪರಮೇಶ್ವರಧ್ಯಾನರತನಾಗಿ ಕೊನೆಗೆ ಹರಿಹರದ ಸ್ಟೇಷನ್ನಿನಲ್ಲಿ ಬಂದಿಳಿದೆನು. ಕೂಡಲೆ ನದಿಗೆ ಹೋಗಿ ಸ್ನಾನವನ್ನು ಮುಗಿಸಿಕೊಂಡು ಸ್ವರೂಪಾನಂದರು ಕುಳಿತಿದ್ದ ಸ್ಥಳವೆಂದು ನನಗೆ ನೆನಪಿದ್ದ ದಿಣ್ಣೆಯ ಕಡೆಗೆ ಹೊರಟೆನು. ಅವರು ಆಗಲೂ ಅಲ್ಲಿಯೇ ಕೂತುಕೊಂಡಿದ್ದರು!

ಈಗ ನಾನು ಅಘಟಿತಘಟನೆಯನ್ನು ಮಾಡುವ ಪರಮೇಶ್ವರನ ಲೀಲೆಯನ್ನು ಕೊಂಡಾಡುತ್ತಾ ಆ ಯತೀಶ್ವರರಿಗೆ ನಮಸ್ಕಾರಮಾಡಿದೆನು. ಅವರು ಕೂಡಲೆ 'ಅಪ್ಪ, ನೀನು ಬಂದದ್ದು ಒಳ್ಳೆಯದಾಯಿತು. ನಾವು ಇಷ್ಟರಲ್ಲಿಯೇ ರಾಮೇಶ್ವರಕ್ಕೆ ಹೋಗಬೇಕೆಂದಿರುವೆವು. ಆದ್ದರಿಂದ ನಿನಗೆ ನಮಗೆ ತಿಳಿದಿರುವಷ್ಟು ವೇದಾಂತಶಾಸ್ತ್ರವನ್ನುಪದೇಶಿಸಬೇಕೆಂದಿರುತ್ತೇವೆ. ನಾಳೆಯ ದಿನವೇ ನಿನಗೆ ಸಂನ್ಯಾಸಾಶ್ರಮವನ್ನು ಕೊಡುತ್ತೇವೆ. ಇನ್ನು ನೀನು ಅಯಾಚಿತವೃತ್ತಿ

ಯಿಂದ ಇದ್ದುಕೊಂಡಿರಬೇಕು. ಇದುವರೆಗೆ ಮಾಡಿದ ಕರ್ಕಶತರ್ಕವಾಕ್ಯಗಳ ಪಠನೆಗೆ ಪ್ರಾಯಶ್ಚಿತ್ತವಾಗಿ ಮೌನವ್ರತದಲ್ಲಿಯೇ ಕಾಲವನ್ನು ಕಳೆಯಬೇಕು. ಈ ಮಹಾಭಾರತವಚನವನ್ನು ಯಾವಾಗಲೂ ಮುಖ್ಯವಾಗಿ ನೆನಪಿನಲ್ಲಿಟ್ಟುಕೊಂಡಿರು :

**"ಭವೇತ್ ಪಂಡಿತಮಾನೀ ಯೋ ಬ್ರಾಹ್ಮಣೋ ವೇದನಿನ್ದಕಃ ।**
**ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಮ್ ॥**
**ಹೇತುವಾದಾನ್ ಬ್ರುವನ್ ಸತ್ಸು ವಿಜೇತಾಹೇತುವಾದಕಃ ।**
**ಆಕ್ರೋಷ್ಟಾ ಚಾತಿವಕ್ತಾ ಚ ಬ್ರಾಹ್ಮಣಾನಾಂ ಸದೈವ ಹಿ ॥**
**ಸರ್ವಾಭಿಶಙ್ಕೀ ಮೂಢಶ್ಚ ಬಾಲಃ ಕಟುಕವಾಗಪಿ ।**
**ಬೋದ್ಧವ್ಯಸ್ತಾದೃಶಸ್ತಾತ ನರಂ ಶ್ವಾನಂ ಹಿ ತಂ ವಿದುಃ ॥"**

(ಭಾವಾರ್ಥ:- ಯಾವನು ತಾನೆ ಪಂಡಿತನೆಂದು ಹೆಮ್ಮೆಪಡುತ್ತಾ ವೇದವನ್ನು ಕೂಡ ನಿಂದಿಸುತ್ತಾ ನಿರರ್ಥಕವಾದ ತರ್ಕವಿದ್ಯೆಯಲ್ಲಿಯೇ ಅನುರಕ್ತನಾಗಿ ಇದಕ್ಕೆ ಇದು ಹೇತುವೆಂದು ಘೋಷಿಸುತ್ತಾ ಸತ್ಪುರುಷರನ್ನು ವಾಗ್ಯುದ್ಧದಲ್ಲಿ ಬಾಯಿಕಟ್ಟಿಸುತ್ತಾ, ನಿಜವಾಗಿರುವ ಹೇತುಗಳನ್ನು ಅರಿಯದೆಯೇ ಯೋಗ್ಯರನ್ನೆಲ್ಲ ಬಯ್ದು ಜರಿಯುತ್ತಿರುವನೋ, ಎಲ್ಲವನ್ನೂ ಶಂಕಿಸುತ್ತಿರುವ ಮೂಢನಾದ ಆ ಕಟುಭಾಷೆಯುವನನ್ನು ಮನುಷ್ಯರೂಪದಲ್ಲಿರುವ ನಾಯಿಯೆನ್ನುವರು.)

ನಾನು ಪಾಠಹೇಳುವಾಗ ನಿನಗೆ ಬಂದೊದಗಬಹುದಾದ ಸಂದೇಹ ನಿವಾರಣೆಗೆ ತಕ್ಕಷ್ಟು ಮಾತುಗಳನ್ನಲ್ಲದೆ ಇನ್ನೇನು ಮಾತನ್ನೂ ಆಡಕೂಡದು. ಯಾವಾಗಲೂ ನಾವು ನಿನಗೆ ಉಪದೇಶಿಸುವ ಪ್ರಣವಮಂತ್ರವನ್ನು ಜಪಿಸುತ್ತಾ ಕಾಲಕ್ಷೇಪವನ್ನು ಮಾಡಬೇಕು, ತಿಳಿಯಿತೆ?" ಎಂದರು.

ಸ್ವರೂಪಾನಂದರ ಅನುಗ್ರಹದಿಂದ ನನಗೆ ಮೂರು ತಿಂಗಳಲ್ಲಿಯೇ ವೇದಾಂತಪಾಠವು ಮುಗಿಯಿತು. ಅವರು ವೇದಾಂತದರ್ಶನದ ಪರಮರಹಸ್ಯವಾದ ಅವಸ್ಥಾತ್ರಯಪ್ರಕ್ರಿಯೆಯನ್ನು ನನಗೆ ಹೇಳಿಕೊಟ್ಟು, ಅವಸ್ಥಾತ್ರಯಕ್ಕೆ ಅತೀತವಾಗಿರುವ ನಿತ್ಯಶುದ್ಧಬುದ್ಧಮುಕ್ತನಾಗಿರುವ ಪರಮಾತ್ಮನ ಆನಂದಸ್ವರೂಪವನ್ನು ತರ್ಕದಿಂದ ಪಡೆಯುವದಕ್ಕಾಗಲಿ ಅಲ್ಲಗಳೆಯುವದಕ್ಕಾಗಲಿ ಆಗಲಾರದೆಂಬುದನ್ನು ಮನಗಾಣಿಸಿಕೊಟ್ಟರು. ಇಷ್ಟೆಲ್ಲ ಆದ ಮೇಲೆ ನಾನು ಗುರುಗಳ ಪೂರ್ವಾಶ್ರಮದ ತಂದೆಯವರಾದ ರಾಮಬುವಾನ ಪ್ರಸ್ತಾಪವನ್ನು ತೆಗೆಯಲಾಗಿ ಅವರು ನಕ್ಕು "ಅಪ್ಪ, ಇದುವರೆಗೆ ನೀನು ವೇದಾಂತಶ್ರವಣವನ್ನು ಮಾಡಿ

ತತ್ತ್ವವನ್ನು ಮನಗಂಡವನಾಗಿರುತ್ತೀಯೆ. ಸಚ್ಚಿದಾನಂದಸ್ವರೂಪನಾದ ಪರಮಾತ್ಮನೇ ನಾನೆಂಬ ಶುದ್ಧಜ್ಞಾನವನ್ನು ಪಡೆದಾತನಿಗೆ ಜನ್ಮಮರಣಾದಿಗಳೇ ಇಲ್ಲದಮೇಲೆ ತಾಯಿತಂದೆಗಳು ಯಾರು, ಎಲ್ಲಿ ಬಂದರು ?

"ನ ಮೃತ್ಯುರ್ನ ಶಙ್ಕಾ ನ ಮೇ ಜಾತಿಭೇದಃ
ಪಿತಾ ನೈವ ಮೇ ನೈವ ಮಾತಾ ಚ ಜನ್ಮ ।
ನ ಬನ್ಧುರ್ನ ಮಿತ್ರಂ ಗುರುರ್ನೈವ ಶಿಷ್ಯ–
ಶ್ಚಿದಾನನ್ದರೂಪಃ ಶಿವೋಽಹಂ ಶಿವೋಽಹಮ್ ॥"

(ಭಾವಾರ್ಥ:– ನನಗೆ ಮರಣವಿಲ್ಲ, ಸಂದೇಹವಿಲ್ಲ, ಜಾತಿಭೇದವಿಲ್ಲ, ತಂದೆಯಿಲ್ಲ, ತಾಯಿಯೂ ಇಲ್ಲ, ಹುಟ್ಟು ಇಲ್ಲ, ಬಂಧುವಿಲ್ಲ, ಸ್ನೇಹಿತನಿಲ್ಲ, ಗುರುವಿಲ್ಲ, ಶಿಷ್ಯನೂ ಇಲ್ಲ ; ಚಿದಾನಂದಸ್ವರೂಪನಾದ ಶಿವನೇ ನಾನು ; ಶಿವನೇ ನಾನು)

ಎಂಬ ಪರಮಮಂತ್ರದ ಅರ್ಥವನ್ನು ಮರೆಯದೆ ಇರು. ಕಾಶಿಯಲ್ಲಿರುವ ರಾಮುವಿನಿಗೆ ನಿಜವಾಗಿಯೂ ನಮ್ಮನ್ನು ನೋಡುವ ಯೋಗವಿದ್ದರೆ ಅದು ಶೀಘ್ರವೇ ಘಟಿಸುವದು. ಆತನೇ ಒಂದುವೇಳೆ ರಾಮೇಶ್ವರಕ್ಕೆ ಏತಕ್ಕೆ ಬರಬಾರದು ? ಅಲ್ಲಿಯೇ ನಮ್ಮಿಬ್ಬರ ಸಮಾಗಮವೂ ಏತಕ್ಕೆ ಆಗಬಾರದು ? ಕಲಕತ್ತೆಯಲ್ಲಿದ್ದ ನಿನಗೆ ಬೆಂಗಳೂರಿಗೆ ಗಮನವೂ ಆಮೇಲೆ ಹರಿಹರದಲ್ಲಿ ನಮ್ಮಿಬ್ಬರ ಸೇರುವಿಕೆಯೂ ಯಾವ ಬ್ರಹ್ಮಲೀಲೆಯಿಂದ ನಡೆದವೋ ಅದೇ ಬ್ರಹ್ಮಲೀಲೆಯಿಂದ ಎಲ್ಲವೂ ನಡೆಯುತ್ತಿರುವದೆಂಬುದನ್ನು ನೀನು ನಿಶ್ಚಯವಾಗಿ ನಂಬು. ಇದಿರಲಿ, ನಾವು ಈ ದಿನ ರಾಮೇಶ್ವರಯಾತ್ರೆಗೆ ಹೊರಡುತ್ತೇವೆ. ನಾಳೆಯ ದಿನ ಬೆಳಗ್ಗೆ ನೀನು ಹರಿಹರೇಶ್ವರನ ದೇವಾಲಯಕ್ಕೆ ಹೋಗಿ ಹೊರಗಿನ ಬಾಗಿಲಲ್ಲಿ ವಿಶ್ವನಾಥನ ಜಯಘೋಷವನ್ನು ಮಾಡುತ್ತಾ ಇರು. ಅಲ್ಲಿಗೆ ಒಬ್ಬ ಮಧ್ಯಮವಯಸ್ಕನಾದ ಗೃಹಸ್ಥನು ಬರುತ್ತಾನೆ. ಅವನಿಗೆ ನಿಜವಾಗಿಯೂ ತತ್ತ್ವವನ್ನರಿತುಕೊಳ್ಳಬೇಕೆಂಬ ಶ್ರದ್ಧೆಯಿದೆ. ಆದರೆ ಪ್ರಾರಬ್ಧವಿಶೇಷದಿಂದ ನಿನ್ನಂತೆಯೇ ಅವನೂ ಘಟಪಟಾವಚ್ಛೇದಕಗಳ ಗಡಿಬಿಡಿಯಲ್ಲಿ ಸಿಕ್ಕಿಬಿದ್ದಿದ್ದಾನೆ. ತರ್ಕಶಾಸ್ತ್ರವು ಸ್ವಲ್ಪಮಟ್ಟಿಗೆ ವಿಚಾರಕ್ಕೆ ಸಹಾಯಕವಾಗಿದ್ದರೂ ಅದರ ಪರಿಚಯವು ಹೆಚ್ಚು ವಿಸ್ತಾರವಾದಹಾಗೆಲ್ಲ ಪರಮಾರ್ಥದ ಸಾಕ್ಷಾತ್ಕಾರಕ್ಕೆ ಪ್ರತಿಬಂಧಕವಾಗುವದೆಂಬುದನ್ನೂ ಗೌತಮಋಷಿಗಳು ಹೇಳಿರುವ ಮಿಥ್ಯಾಜ್ಞಾನಕ್ಕೆ ಪರಿಹಾರಕವಾದದ್ದು ಆತ್ಮೈಕ್ಯವಿದ್ಯೆಯೇ ಹೊರತು ಮಾಯಾದ್ವೈತದಲ್ಲಿಯೇ ಸತ್ಯತ್ವಭ್ರಮೆಯನ್ನುಂಟುಮಾಡುವ ತರ್ಕವಲ್ಲವೆಂಬ ರಹಸ್ಯವನ್ನೂ ಅವನಿಗೆ ಮನ

ಗಾಣಿಸು. ಅದಕ್ಕಾಗಿ ನೀನು ಸ್ವಲ್ಪವೂ ಶ್ರಮಪಡಬೇಕಾಗಿಲ್ಲ. ನಿನ್ನ ಕಥೆಯನ್ನು ಸಾಂಗವಾಗಿ ಅವನಿಗೆ ಹೇಳಿದರೆ ಸಾಕು. ಮಿಕ್ಕದ್ದನ್ನು ಅವನೇ ಊಹಿಸಿಕೊಳ್ಳುವನು" ಎಂದು ಅಪ್ಪಣೆಕೊಡಿಸಿ ನನ್ನೆಯೇ ಅವರು ದಯಮಾಡಿಸಿದರು. ನಾನು ಅವರಪ್ಪಣೆಯಂತೆ ಇಲ್ಲಿ ಬಂದು ಕೂತುಕೊಳ್ಳುವ ಹೊತ್ತಿಗೆ ನೀನೂ ಹರಿಹರೇಶ್ವರನ ದರ್ಶನಕ್ಕೆ ಬಂದೆ. ಸದ್ಗುರುವಿನ ಕೃಪೆಯಿಂದ ನನ್ನ ಅಶ್ವಾವತಾರದ ಚರಿತ್ರೆಯು ಅಚ್ಚಳಿಯದೆ ನನಗೆ ನೆನಪಿನಲ್ಲಿದ್ದುದರಿಂದ ನಿನಗೆ ಯಥಾವತ್ತಾಗಿ ಹೇಳಿದ್ದೇನೆ. ಇನ್ನು ನನ್ನ ಕೆಲಸವಾಯಿತು."

ವಾಚಕರೆ, ಆ ಯತಿಶ್ರೇಷ್ಠರು ಹೀಗೆಂದು ನುಡಿದು ಮೌನವನ್ನು ಧರಿಸಿದರು. ಬಳಿಕ ನಾನು ಆಶ್ಚರ್ಯದಿಂದಲೂ ಭಯಭಕ್ತಿಯಿಂದಲೂ ಕೂಡಿದವನಾಗಿ ಅವರಿಗೆ ಪ್ರದಕ್ಷಿಣನಮಸ್ಕಾರವನ್ನು ಮಾಡಿ, "ಸ್ವಾಮಿ, ನನಗೆ ಪರಮಾನಂದಸ್ವರೂಪವನ್ನು ಕಂಡುಕೊಳ್ಳುವ ವೇದಾಂತವನ್ನೇ ಉಪದೇಶಮಾಡಬೇಕು" ಎಂದು ಪ್ರಾರ್ಥಿಸಿಕೊಂಡೆನು. ಅವರು "ಅದಾಗದು, ನಾನು ಗುರುಗಳ ಅಪ್ಪಣೆಯಿದ್ದಷ್ಟು ಕಾರ್ಯವನ್ನು ಮಾಡಿದ್ದೇನೆ. ನೀನು ಇಷ್ಟರಲ್ಲಿಯೇ ಕಾಲಟಿಯಲ್ಲಿ ನಡೆಯುವ ಕುಂಭಾಭಿಷೇಕದ ಸಮಯಕ್ಕೆ ಅಲ್ಲಿಗೆ ಹೋದರೆ ಶ್ರೀಶೃಂಗಗಿರಿಯ ಜಗದ್ಗುರುಗಳು ನಿನಗೆ ಭಾಷ್ಯಶಾಂತಿಯನ್ನು ಮಾಡಿಸುವರು. ಆಮೇಲೆ ಶ್ರೀಶಂಕರಭಗವತ್ಪಾದರ ಅನುಗ್ರಹದಿಂದ ನಿನಗೆ ಅವರ ಹೃದಯವು ಕೈವಶವಾಗುವದು" ಎಂದು ಹೇಳಿ ಅಲ್ಲಿ ಇನ್ನು ಒಂದು ಕ್ಷಣವೂ ನಿಲ್ಲದೆ ಹೊರಟೇಹೋಗಿಬಿಟ್ಟರು. ಆಮೇಲೆ ಅವರನ್ನು ಎಲ್ಲಿ ಹುಡುಕಿಸಿದರೂ ಸಿಕ್ಕಲೇ ಇಲ್ಲ! ನಾನು ಅವರ ಪರಮಾದ್ಭುತವಾದ ಕಥೆಯನ್ನು ಒಂದು ಕ್ರಮವಾಗಿ ಬರೆದಿಟ್ಟೆನು. ಅವರು ಕಥೆಯನ್ನು ಹೇಳುತ್ತಿದ್ದ ಹಾಗೆಯೇ ಅವರ ಬಾಯಿಂದ ಬರುತ್ತಿದ್ದ ತರ್ಕಪಙ್ಕ್ತಿಗಳನ್ನು ನನ್ನ ಡೈರಿಯಲ್ಲಿ ಬರೆದುಕೊಂಡೆನಾದ್ದರಿಂದ ಅವುಗಳನ್ನು ಈ ಕಥೆಯಲ್ಲಿ ಸೇರಿಸುವದಕ್ಕೆ ಅನುಕೂಲವಾಯಿತೇ ಹೊರತು ಅವುಗಳ ಅರ್ಥವೇನೆಂಬುದರ ವಾಸನೆಕೂಡ ನನಗಿಲ್ಲ. ಮನೋವಾಗಗೋಚರನಾದ ಪರಮಾತ್ಮನು ಈ ತನ್ನ ಸೃಷ್ಟಿಯಲ್ಲಿ ಎಂಥೆಂಥ ಲೀಲೆಗಳನ್ನು ತೋರಿಸುತ್ತಿರುವನೋ ಯಾರುತಾನೆ ಹೇಳಲಾಪರು ?

15-11-57, 2000. ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.